www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ -10 ಸಂಚಿಕೆ - 2 ಫೆಬ್ರವರಿ 2014
Volume : X Issue : II February 2014

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2 ಕ್ರಿಸ್ತನ ಮೂಲಕ ಆಶೀರ್ವಾದಗಳು
3. ವಯಸ್ಕರ ಸ್ವರ
4. ಆರೋಗ್ಯ ಸ್ವರ
5. ಭಯಂಕರವಾದದ್ದು
6. ನೀತಿವಂತನ ಆಶೀರ್ವಾದಗಳು
7. ಸಾಕ್ಷಿಯ ಸ್ವರ
8. ಪ್ರಾರ್ಥನಾ ಸ್ವರ
9. ಮಹಿಳೆಯರ ಸ್ವರ
10. ಸ್ಥಳೀಯ ವಿದೇಶಿ ಸುದ್ಧಿಗಳು
11. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ ಸಹೋದರಿಗೆ ವಂದನೆಗಳು.

2014 ಮೊದಲನೇ ತಿಂಗಳನ್ನು ಕಳೆದು 2ನೇ ತಿಂಗಳಿಗೆ ಕಾಲಿಟ್ಟಿದ್ದೇವೆ. ದಿವಸಗಳು ವೇಗವಾಗಿ ಕಳೆಯುತ್ತಾ ಇದೆ. ಕೆಲಸ ಮಾಡಲ್ಲಿಕ್ಕೆ ಇರುವ ಸಮಯ ಸ್ವಲ್ಪವಾದ್ದದು. ಸ್ವಲ್ಪ ಸಮಯದಲ್ಲಿ ದೊಡ್ಡ ಕೆಲಸವನ್ನು ಕರ್ತನಿಗಾಗಿ ನಾವು ಮಾಡಬೇಕಾಗಿದೆ. **"ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು. ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ ಅಂದನು"** (ಯೋಹಾ. 9:4–5). ಹಗಲಿರುವಾಗಲೇ ಕೆಲಸ ಮಾಡಬೇಕೆಂದು ಯೇಸು ಹೇಳಿದ್ದಾನೆ. ಈ ಮೇಲಿನ ವಾಕ್ಯ ಹೇಳುವುದರ ಉದ್ದೇಶವೇನು? ಹಗಲು ಎಂದರೆ ನಮ್ಮ ಜೀವಿತದಲ್ಲಿ ಆರೋಗ್ಯ ಇರುವ ಸಮಯ, ಹಗಲು ಎಂದರೆ ಸೇವೆಗಾಗಿ ಅವಕಾಶ ಇರುವ ಸಮಯ, ಹಗಲು ಎಂದರೆ ಜೀವದಿಂದಿರುವ ಸಮಯ, ಹಗಲು ಎಂದರೆ ತಡೆಗಳು ಇಲ್ಲದ ಸಮಯ, ಹಗಲು ಎಂದರೆ ಶರೀರದಲ್ಲಿ ಬಲ ಇರುವ ಸಮಯ. ಅದಕ್ಕಾಗಿ ಕರ್ತನ ಸೇವೆ ಮಾಡಲು ನಾವು ತ್ವರೆಪಡಬೇಕಾಗಿದೆ. **"ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ; ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚೀಯೋನಿಗೆ ತಿಳಿಸುವವನಾಗಿದ್ದಾನೆ"** (ಯೆಶಾ. 52: 7, ಎಫೆ. 6:14). ದೇವರ ಸ್ವರ ಮಾಸ ಪತ್ರಿಕೆಯು ದೇವರ ವಾಕ್ಯದ ಸಂದೇಶಗಳನ್ನು ಹೊತ್ತುಕೊಂಡು ಭಾರತ ದೇಶದ ಒಳಗೂ, ಭಾರತ ದೇಶದ ಹೊರಗೂ ಒಬ್ಬ ಸುವಾರ್ತಿಕನ ಸೇವೆಯನ್ನು ಮಾಡುತ್ತಾ ಇದೆ. ಅನೇಕರು ತಲುಪಲು ಆಗದಂತಹ ಸ್ಥಳಗಳಿಗೆ ದೇವರ ಸ್ವರ ಮಾಸ ಪತ್ರಿಕೆಯು ಹೋಗಿ ಸುವಾರ್ತೆಯನ್ನು ತಲುಪಿಸುತ್ತಾ ಇದೆ. ಅದಕ್ಕಾಗಿ ಈ ಮಾಸ ಪತ್ರಿಕೆಯ ಸೇವೆಯನ್ನು ತಾವೆಲ್ಲರೂ ಪ್ರೋತ್ಸಾಹಿಸಬೇಕಾಗಿ ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

1. ನಿಮ್ಮ ವಾರ್ಷಿಕ ಚಂದಾ ಹಣವನ್ನು ಭರಿಸದೇ ಇದ್ದರೆ ಅದನ್ನು ಭರಿಸತಕ್ಕದ್ದು.
2. ನಿಮ್ಮ ಸೇಹ್ನಿತರು ನಿಮ್ಮ ಕುಟುಂಬದ ಸದಸ್ಯರು, ನೆರೆಹೊರೆಯವರು, ಪರಿಚಯದವರು ಮತ್ತು ನಿಮ್ಮ ಜೊತೆ ಕೆಲಸ ಮಾಡುವಂತಹ ವ್ಯಕ್ತಿಗಳ ವಿಳಾಸಗಳನ್ನು ಮತ್ತು ಅದರ ವಾರ್ಷಿಕ ಚಂದಾ ಹಣವನ್ನು ನಮಗೆ ಕಳುಹಿಸಿಕೊಡುವುದಾದರೆ ನಾವು ದೇವರ ಸ್ವರ ಮಾಸ ಪತ್ರಿಕೆಯನ್ನು ಆ ವ್ಯಕ್ತಿಗಳಿಗೆ ತಪ್ಪದೇ ಮುಟ್ಟಿಸುತ್ತೇವೆ.
3. ಈ ಮಾಸ ಪತ್ರಿಕೆಯನ್ನು ನಿಮಗೆ ಗೊತ್ತಿರುವ ಎಲ್ಲಾ ಜನರಿಗೆ ಪರಿಚಯಪಡಿಸಿರಿ.
4. ಈ ಮಾಸ ಪ್ರತಿಕೆಯ ಪ್ರತಿಯೊಂದು ಕಾರ್ಯಗಳಿಗಾಗಿ ತಪ್ಪದೇ ಪ್ರಾರ್ಥಿಸಿರಿ.
5. ನಿಮಗೆ ಈ ಮಾಸ ಪತ್ರಿಕೆಯ ಕುರಿತು ಸಿಕ್ಕಿರುವ ಆಶೀರ್ವಾದಗಳ ಕುರಿತು ಸಾಕ್ಷಿಯನ್ನು ಸಂಕ್ಷಿಪ್ತವಾಗಿ ಬರೆದು ನಿಮ್ಮ ಭಾವಚಿತ್ರದೊಂದಿಗೆ ಕಳುಹಿಸಿಕೊಡಿ ಅದನ್ನು ನಾವು ತಪ್ಪದೇ ದೇವರ ಸ್ವರ ಮಾಸ ಪತ್ರಿಕೆಯಲ್ಲಿ ಮುದ್ರಿಸುತ್ತೇವೆ.
6. ಈ ಮಾಸ ಪತ್ರಿಕೆಯು ಸರಿಯಾದ ರೀತಿಯಲ್ಲಿ ಸಿಗದೇ ಇದ್ದರೆ ದಯಮಾಡಿ ನಮ್ಮ ಗಮನಕ್ಕೆ ತರಬೇಕೆಂದು ವಿನಂತಿಸುತ್ತೇನೆ.
7. ನಿಮ್ಮ ವಿಳಾಸಗಳು ಬದಲಾಗಿದ್ದಲ್ಲಿ ಅದನ್ನು ನಮ್ಮ ಗಮನಕ್ಕೆ ತಂದು ನೂತನ (ಹೊಸ) ವಿಳಾಸವನ್ನು ಕಳುಹಿಸಿಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ.

**ನೀವು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 08202002781, 2589070.**
**ನಮ್ಮ ಕಚೇರಿಯ ಸಮಯ (ವೇಳೆ):– 10.00 am to 5.00 pm.**

ಇಲ್ಲಿಯವರೆಗೆ ತಾವು ಕೊಟ್ಟ ಎಲ್ಲಾ ಸಹಕಾರಕ್ಕಾಗಿ ನಾವು ವಂದನೆಯನ್ನು ಸಲ್ಲಿಸುತ್ತೇವೆ. ಇನ್ನು ಮುಂದೆಯು ತಮ್ಮ ಸಹಕಾರವನ್ನು ಎದುರುನೋಡುತ್ತಾ ಇದ್ದೇವೆ. ಕರ್ತನಾದ ಯೇಸುಕ್ರಿಸ್ತನು ನಿಮ್ಮನ್ನು, ನಿಮ್ಮ ಕುಟುಂಬವನ್ನು ಹೇರಳವಾಗಿ ಆಶೀರ್ವದಿಸಲಿ.

ವಂದನೆಗಳೊಂದಿಗೆ,

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **"ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು"**(ಅ.ಕೃ. 20:30). ತಪ್ಪಾದ ಬೋಧನೆಗಳ ಆಕ್ರಮಣಕ್ಕೆ ಇಂದು ಅನೇಕ ಕ್ರಿಸ್ತನ ಸಭೆಗಳು ಒಳಗಾಗಿವೆ  ಇದು ಯಾಕೆ ಹೀಗೆ ಸಂಭವಿಸುತ್ತದೆ ಎಂದು ದೇವರ ವಾಕ್ಯದ ಬೆಳಕಿನಲ್ಲಿ ನಾವು ಕಾಣಬೇಕು. **"ದೇವರ ವಾಕ್ಯವು ನನ್ನ ಕಾಲಿಗೆ ದೀಪವೂ ದಾರಿಗೆ ಬೆಳಕೂ ಆಗಿದೆ"** (ಕೀರ್ತ. 119:105).

**ಕ್ರೈಸ್ತ ವಿಶ್ವಾಸಿಗಳು ಮೋಸ ಹೋಗಲು ಕಾರಣವೇನು :**

1) **"ಆದಕಾರಣ ನನ್ನ ಜನರು ಜ್ಞಾನ ಹೀನರಾಗಿ ಸೆರೆಗೆ ಹೋಗುವುದು ಖಂಡಿತ. ಘನವಂತರು, ಹಸಿಯುವರು, ಸಾಮಾನ್ಯರು ಬಾಯಾರುವರು"** (ವಾಕ್ಯದ ಜ್ಞಾನ ಹೀನತೆಯಿಂದ ಸೆರೆ) (ಯೆಶಾ. 5:13).

2) **"ಸದುಪದೇಶದ ಕೊರತೆಯಿಂದಲೇ ಸಾಯುವನು, ತನ್ನ ಅತಿ ಮೂರ್ಖತನದಿಂದ ಭ್ರಾಂತನಾಗುವನು"** (ಉಪದೇಶದ ಕೊರತೆ) (ಜ್ಞಾನೋ. 5:23).

3) **ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ** (ದೈವೀಕ ಜ್ಞಾನದ ಕೊರತೆಯಿಂದ ಹಾಳಾಗುವುದು) (ಹೋಶೆ. 4:6).

4) **"ಅದಕ್ಕೆ ಯೇಸು ಉತ್ತರವಾಗಿ ಅವರಿಗೆ ನೀವು ಶಾಸ್ತ್ರವನ್ನಾದರೂ, ದೇವರ ಶಕ್ತಿಯನ್ನಾದರೂ ತಿಳಿಯದೇ ತಪ್ಪುವವರಾಗಿದ್ದೀರಿ"** (ವಾಕ್ಯ ತಿಳಿಯದೆ ತಪ್ಪುವದು) (ಮತ್ತಾ. 22:29).

5) **"ದೇವರ ಧರ್ಮೋಪದೇಶವು ಅವನ ಹೃದಯದಲ್ಲಿರುವದು ಅವನು ಜಾರುವುದೇ ಇಲ್ಲ"** (ಹೃದಯದಲ್ಲಿ ವಚನ ಇಲ್ಲದ ಕಾರಣ ಜಾರುತ್ತಾರೆ) (ಕೀರ್ತ. 37:31).

6) **"ಯಾವನು ದುಷ್ಟರ ಆಲೋಚನೆಯಂತೆ ನಡೆಯದೇ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕ ರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು"** (ದೇವರ ವಾಕ್ಯದ ಧ್ಯಾನ) (ಕೀರ್ತ. 1:1–3).

7) **"ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು"** (ವಾಕ್ಯ ಕೇಳಿದ ಮೇಲೆ ತಿಳುಕೊಳ್ಳಬೇಕು ಆಗ ಮಾತ್ರ ಫಲಕೊಡಲು ಸಾಧ್ಯ). (ಮತ್ತಾ. 13:23).

ಕೆಲವರು ಸಭೆಯಲ್ಲಿ ಗಲಿಬಿಲಿ ಮಾಡುವುದಕ್ಕಾಗಿಯೇ ಇರುತ್ತಾರೆ. ಅವರಿಗೆ ಬೇರೆ ಏನೂ ಕೆಲಸ ಇರುವುದಿಲ್ಲ. ಇತರರನ್ನು ಪ್ರೋತ್ಸಾಹಿಸಲು ಮತ್ತು ಇತರರ ಭಕ್ತಿ ವೃದ್ಧಿಮಾಡಲು ಅವರಿಗೆ ಗೊತ್ತಿರುವುದಿಲ್ಲ, ದೇವ ಸೇವಕರ ಪ್ರಸಂಗದಲ್ಲಿ ತಪ್ಪುಕಂಡು ಹಿಡಿಯುವುದು, ತಪ್ಪುಹೊರಿಸುವದು, ಭೇದಗಳನ್ನುಂಟುಮಾಡುವುದು, ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟುವುದು, ಐಕ್ಯತೆ ಕೆಡಿಸುವುದು, ವಚನಗಳನ್ನು ತಪ್ಪಾಗಿ ಹೇಳುವುದು ಅಥವಾ ಹೊರಗಿನ ಪರಿಶುದ್ಧತೆ ಬಗ್ಗೆಯೇ ಮಾತನಾಡುವುದು, ಅವರ ಬಟ್ಟೆ ಸರಿಇಲ್ಲ ಅವರು ಬಿಳಿ ಬಟ್ಟೆಯನ್ನೇ ಹಾಕಬೇಕು, ಅವರು ಉಪವಾಸ ಮಾಡುತ್ತಾರೆ, ಅವರು ಚಪ್ಪಲಿ ತೆಗೆಯದೇ ಆಲಯದೊಳಕ್ಕೆ ಬರುತ್ತಾರೆ, ಒಳಗಿನ ಸ್ವಭಾವದ ಪರಿವರ್ತನೆ ಬಗ್ಗೆ ಇವರಿಗೆ ಚಿಂತನೇ ಇಲ್ಲ. **"ತಮ್ಮ ಕೊಳೆಯನ್ನು ತೊಳಕೊಳ್ಳದೆ ತಾವೇ ಶುದ್ಧರೆಂದು ಎಣಿಸಿಕೊಳ್ಳುವ ಬೇರೊಂದು ತರದವರುಂಟು"** (ಜ್ಞಾನೋ. 30:12). ಕರ್ತನಾದ ಯೇಸುಕ್ರಿಸ್ತನು ಮತ್ತಾ. 5:20ರಲ್ಲಿ **ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಪರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕ ರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ.** ಇಂದಿಗೂ ಸಭೆಯ ಒಳಗಡೆ ಫರಿಸಾಯರು ಮತ್ತು ಸದ್ದುಕಾಯಕರ ಆತ್ಮ ಕ್ರಿಯೆ ಮಾಡುತ್ತಿರುವುದನ್ನು ಕಾಣಬಹುದು. ಇವರು ಆತ್ಮೀಕವಾಗಿ ಬೆಳೆಯುವುದಿಲ್ಲ, ಬೇರೆಯವರನ್ನು ಬೆಳೆಯಲು ಬಿಡುವುದಿಲ್ಲ. ಇವರ ಭಾವನೆ ತಾವು ಮಾತ್ರ ಪರಿಶುದ್ಧರು ಉಳಿದವರೆಲ್ಲರೂ ಪಾಪಿಗಳು ಮತ್ತು ಕೊರತೆಯುಳ್ಳವರು. ಆಗ ಆತನು ಅವರಿಗೆ ಹೇಳಿದೇನೆಂದರೆ ಮನುಷ್ಯರ ಮುಂದೆ ನೀತಿವಂತರೆಂದು ತೋರಿಸಿಕೊಳ್ಳುವವರು. ನೀವು; ಆದರೆ ದೇವರು ನಿಮ್ಮ ಹೃದಯಗಳನ್ನು ತಿಳುಕೊಂಡಿದ್ದಾನೆ. ಮನುಷ್ಯರಲ್ಲಿ ಶ್ರೇಷ್ಠವೆನಿಸಿಕೊಳ್ಳುವಂಥದ್ದು ದೇವರ ದೃಷ್ಟಿಯಲ್ಲಿ

ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವಸ್ಥಾನವು ನನಗೆ ಇಷ್ಟ (ಕೀರ್ತ. 26:8).

ಅಸಹ್ಯವಾಗಿದೆ. (ಲೂಕ. 18:9–14, ಲೂಕ. 16:15)

ಕರ್ತನಲ್ಲಿ ಪ್ರಿಯ ಸಹೋದರ, ಸಹೋದರಿಯೇ ನೀನು ರಕ್ಷಣೆ ಹೊಂದಿ ಒಂದು ಸಭೆಯಲ್ಲಿ ಇರುವಾಗ ಆ ಸಭೆಗೆ ಆಶೀರ್ವಾದವಾಗಿರಬೇಕೆ ವಿನಃ ಸಮಸ್ಯೆಗೆ ಕಾರಣವಾಗಿರಬಾರದು. ನಮ್ಮ ಕೊರತೆಗಳನ್ನು ನಾವು ಪರಿಶುದ್ಧಾತ್ಮನ ಸಹಾಯದಿಂದ ಸ್ವಪರೀಕ್ಷೆ ಮಾಡಿಕೊಳ್ಳುವುದಾದರೆ ಎಷ್ಟೋ ಕೊರತೆಗಳು ನಮ್ಮಲ್ಲಿರುತ್ತವೆ. ದಾವೀದನು ಯಾವಾಗಲೂ ತನ್ನ ಸ್ವ ಪರೀಕ್ಷೆ ಮಾಡುವುದರಲ್ಲಿ ಎಚ್ಚರಿಕೆಯುಳ್ಳವನಾಗಿದ್ದನು (ಕೀರ್ತ. 19:12–14, ಕೀರ್ತ. 139:23–24). **“ಆದರೆ ಇಸ್ರಾಯೇಲ್ ಜನರಲ್ಲಿ ಸುಳ್ಳು ಪ್ರವಾದಿಗಳೂ ಎದ್ದರಲ್ಲಾ; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳುಬೋಧಕರು ಇರುವರು. ಅವರು ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು ಎಂದೂ ಹೇಳುವವರೂ ಆಗಿದ್ದು ಫಕ್ಕನೇ ತಮ್ಮ ಮೇಲೆ ನಾಶವನ್ನು ಬರಮಾಡಿಕೊಳ್ಳುವರು. ಅವರ ನಿರ್ಲಜ್ಜಾಕೃತ್ಯಗಳನ್ನು ಅನೇಕರು ಅನುಸರಿಸುವರು; ಅವರ ನಿಮಿತ್ತ ಸತ್ಯ ಮಾರ್ಗಕ್ಕೆ ದೂಷಣೆ ಉಂಟಾಗುವದು. ಅವರು ದ್ರವ್ಯಾಶೆಯುಳ್ಳವರಾಗಿ ಕಲ್ಪನೆಯ ಮಾತುಗಳನ್ನು ಹೇಳುತ್ತಾ ನಿಮ್ಮಿಂದ ಲಾಭವನ್ನು ಸಂಪಾದಿಸಬೇಕೆಂದಿರುವರು”** (2 ಪೇತ್ರ. 2:1–3). **“ಎಲೈ, ದೇವರ ಮನುಷ್ಯನೇ, ನೀನಾದರೋ ಇವುಗಳಿಗೆ ದೂರವಾಗಿರು; ನೀತಿ ಭಕ್ತಿ ನಂಬಿಕೆ ಪ್ರೀತಿ ಸ್ಥಿರಚಿತ್ತ ಸಾತ್ವಿಕತ್ವ ಇವುಗಳನ್ನು ಸಂಪಾದಿಸುವದಕ್ಕೆ ಪ್ರಯಾಸಪಡು. ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯಜೀವವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು, ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ”** (1 ತಿಮೊ. 6:11–12).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ಯಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

---

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**



**“ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ.”** ಜ್ಞಾನೋಕ್ತಿ 22:9.

ಯೆಹೋವನು ನನಗೆ ಬಲವೂ ಗುರಾಣಿಯೂ ಆಗಿದ್ದಾನೆ; ನಾನು ಆತನಲ್ಲಿ ಭರವಸವಿಟ್ಟೆನು, ನನಗೆ ಸಹಾಯವು ಉಂಟಾಯಿತು (ಕೀರ್ತ. 28:7).

# ಕ್ರಿಸ್ತನ ಮೂಲಕ ಆಶೀರ್ವಾದಗಳು

**ಪ್ರಿಯ ವಾಚಕರಲ್ಲಿ ವಿನಂತಿ:** ಕಳೆದ ಸಂಚಿಕೆಯಲ್ಲಿ ತಾಂತ್ರಿಕ ದೋಷಗಳಿಂದ ಕ್ರಿಸ್ತನ ಮೂಲಕ ಆಶೀರ್ವಾದಗಳು ಈ ಸಂದೇಶದಲ್ಲಿ ಅನೇಕ ತಪ್ಪುಗಳು ಕಂಡು ಬಂದಿರುತ್ತವೆ. ಅದಕ್ಕಾಗಿ ನಾವು ತಮ್ಮಲ್ಲಿ ಕ್ಷಮೆಯಾಚಿಸುತ್ತೇವೆ.

ಕ್ರಿಸ್ತನ ಸಂದೇಶವು ನಮ್ಮ ಆತ್ಮಗಳಿಗೆ ಸಂತಸವನ್ನು ತರುವಂತಹ ಸುಸಮಯವಾಗಿರುತ್ತದೆ. ಈ ಶುಭ ದಿನದಂದು ದೇವರು ಮನುಷ್ಯನ ರೂಪದಲ್ಲಿ ಕಣ್ಣಿಗೆ ಕಾಣಿಸಿಕೊಂಡನು. ಅದಕ್ಕೋಸ್ಕರವೇ ಎಲ್ಲಾ ಮಾನವ ಕುಲದವರು ಸೇರಿ ಒಬ್ಬರನ್ನೊಬ್ಬರು ಸಂದರ್ಶಿಸಿ ಸುವಾರ್ತೆಯನ್ನು ಹೇಳುತ್ತಾರೆ. ಆದಾಗ್ಯೂ ಇನ್ನು ಕೆಲವರು ಯೇಸು ಕ್ರಿಸ್ತನು ಈ ಲೋಕದಲ್ಲಿ ಏತಕ್ಕಾಗಿ ಜನಿಸಿದನು ಎಂದು ಆಶ್ಚರ್ಯ ಪಡುತ್ತಾರೆ. ಈ ಪ್ರಶ್ನೆಗೆ ಉತ್ತರ ಕೆಳಕಂಡ ವಾಕ್ಯದಲ್ಲಿ ಕಾಣಬಹುದು.

**"ಆಕೆಯು (ಕನ್ಯಾ ಮರಿಯಳು) ಒಬ್ಬ ಮಗುವನ್ನು ಹಡೆಯುವಳು; ನೀನು ಅವನಿಗೆ 'ಯೇಸು' ಎಂದು ಹೆಸರಿಡಬೇಕು; ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು"**(ಮತ್ತಾ. 1:21).

ಈ ಹೇಳಿಕೆಯನ್ನು ದೇವದೂತನು ಮರಿಯಳೊಂದಿಗೆ ನಿಶ್ಚಯವಾಗಿದ್ದ ಯೋಸೇಫನಿಗೆ ಹೇಳಿದನು. ಪೌಲನು ಹೀಗೆ ಹೇಳುತ್ತಾನೆ **"ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು"** (1ತಿಮೋ 1:15).

ಹೌದು ಮಾನವ ಕುಲವನ್ನು 'ಪಾಪದ' ಬಂಧನದಿಂದ ವಿಮೋಚಿಸಲು ದೇವರು ಈ ಲೋಕದಲ್ಲಿ 'ಯೇಸು' ಎಂಬ ಹೆಸರಿನಿಂದ ಜನಿಸಿದನು ಎಂಬುದು ಸತ್ಯವಾಗಿರುತ್ತದೆ.

ನಾನು ಒಮ್ಮೆ ಮನಕರಗುವಂತಹ ಕಥೆಯನ್ನು ಓದಿದೆ. ಒಂದು ಹೊರ ದೇಶದಲ್ಲಿ ಕುರಿಹಿಂಡುಗಳ ಜೊತೆಯಲ್ಲಿ ಒಬ್ಬ ಕುರುಬನು ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಜೀವಿಸುತ್ತಿದ್ದನು. ಒಂದು ದಿನ ಭಾರಿ ಬಿರುಗಾಳಿಯಿಂದಾಗಿ ತನ್ನ ಕುರಿಹಿಂಡಿನಿಂದ ಒಂದು ಕುರಿ ತಪ್ಪಿಸಿ ಕೊಂಡಿರುವುದನ್ನು ತಿಳಿದುಕೊಂಡನು. ಆ ಕುರುಬನ ಮಗನು ತಂದೆಯ ಚಿತ್ತದಂತೆ ತಪ್ಪಸಿಕೊಂಡ ಕುರಿಯನ್ನು ಹುಡುಕಲು ಹೊರಟನು. ಅವನು ಆರು ಘಂಟೆಗಳ ಕಾಲ ಭಯಂಕರ ಚಳಿಯಲ್ಲಿ ತಡೆರಹಿತವಾಗಿ ಹುಡುಕಾಡಿದ ನಂತರ, ಅವನು ತನ್ನ ಕುರಿಯನ್ನು ಕಂಡು ಮಹಾಸಂತೋಷಪಟ್ಟನು. ಆದರೆ ಅವನು ಮನೆಗೆ ಹಿಂತಿರುಗಿದ ನಂತರ ಅವನು ಅನಾರೋಗ್ಯದಿಂದ ಹಾಸಿಗೆ ಹಿಡಿಯಬೇಕಾಯಿತು.

ಈ ಖಾಯಿಲೆಯಾದ ಮನುಷ್ಯನಿಗೆ ಸಂತೈಸುವಿಕೆಯ ಮಾತುಗಳನ್ನು ಬೋಧಿಸಲು ಒಬ್ಬ ಬೋಧಕನನ್ನು ಕರಿಸಲಾಯಿತು. ಆ ಬೋಧಕನು ಸತ್ಯವೇದದಲ್ಲಿ ಲೂಕ 15;4–6 ರಲ್ಲಿ ಬರೆದಿರುವ ಒಂದು ಸಾಮ್ಯದ ಬಗ್ಗೆ ವಿವರಿಸಿದನು. ಅದರಲ್ಲಿ ಹೇಗೆ ಕುರುಬನು ತಾನು ಕಳೆದುಕೊಂಡ ಕುರಿಮರಿಯನ್ನು ಹುಡುಕಿದನು. ನಂತರ ಅದು ಸಿಕ್ಕಿದ ಮೇಲೆ ಪಟ್ಟ ಸಂತೋಷದ ಬಗ್ಗೆ ವರ್ಣಿಸಿದನು. ಆದರೆ ಸಾಮ್ಯದಲ್ಲಿ ಹೇಳಿರುವ ಕುರುಬನಿಗೂ ಮತ್ತು ಈತನಿಗೂ ಏನು ವ್ಯತ್ಯಾಸ ಅಂದರೆ ಆ ಬೋಧಕನು ಸಂತೈಸುತ್ತಿದ್ದ ಯುವಕನು ಖಾಯಿಲೆಯಿಂದ ಸಾವಿನ ಹಾಸಿಗೆಯಲ್ಲಿದ್ದನು. ಅದೇ ರೀತಿಯಲ್ಲಿ 2000 ವರ್ಷಗಳ ಹಿಂದೆ ದೇವರು ತನ್ನ ಒಬ್ಬನೇ ಮಗನನ್ನು ಈ ಲೋಕದಲ್ಲಿರುವ ಪಾಪಿಷ್ಟರನ್ನೆಲ್ಲಾ ಹುಡುಕಿ, ಅವರನ್ನು ನೀತಿ ಮಾರ್ಗಕ್ಕೆ ತರುವುದಕ್ಕಾಗಿ ಈ ಲೋಕಕ್ಕೆ ಕಳುಹಿಸಿದನು. ಈ ರೀತಿಯಾದ ಸ್ಥಿತಿಯಿಂದ ಆತನು ತನ್ನ ಪ್ರಾಣವನ್ನು ಶಿಲುಬೆಯ ಮೇಲೆ ನೀಡಬೇಕಾಯಿತು.

ಬೋಧಕನು ಹೇಳಿದ ಮಾತನ್ನು ಕೇಳಿದ ಆ ಯುವಕನು, ಕರ್ತನಾದ ಯೇಸು ಕ್ರಿಸ್ತನು ಮನುಷ್ಯ ರೂಪದಲ್ಲಿ ಈ ಲೋಕಕ್ಕೆ ಬಂದು ಮಾನವರನ್ನು ಕೇವಲ ಪಾಪದಿಂದ ರಕ್ಷಿಸಲು ಮತ್ತು ತಂದೆಯಾದ ದೇವರೊಂದಿಗೆ ನಿರಂತರ ಜೀವಿತ ಮಾರ್ಗದ ಬಗ್ಗೆ ಮಾರ್ಗದರ್ಶನಕ್ಕಾಗಿ ಬಂದಿರುವುದು ನನಗೆ ಚೆನ್ನಾಗಿ ಗೊತ್ತು ಎಂದು ಗಟ್ಟಿಯಾಗಿ ಕೂಗುತ್ತಾ **"ಕರ್ತನಾದ ಯೇಸುವೇ, ನೀನು ಶಿಲುಬೆಯ ಮೇಲೆ ಕೊಟ್ಟ ಪ್ರಾಣವು ನಮ್ಮಂತವರಿಗಾಗಿಯೇ ಎಂದು ನನಗೆ ಚೆನ್ನಾಗಿ ತಿಳಿದಿದೆ."** ಎಂದು ಒತ್ತಿ ಹೇಳಿದನು. ಈ ರೀತಿ ಅವನು ಹೇಳುತ್ತಿರುವಾಗಲೇ ಅವನ ಹೃದಯದಲ್ಲಿ ದೈವಿಕ ಸಂತೋಷ ತುಂಬಿಕೊಂಡಿತು ಮತ್ತು ಸಮಾಧಾನವು ನೆಲಸಿತು. ನಂತರ ಅವನ ಆತ್ಮ ಅವನನ್ನು ಬಿಟ್ಟು ಪರಲೋಕದಲ್ಲಿರುವ ದೇವರಲ್ಲಿಗೆ ಹೋಯಿತು.

ಹೌದು! ನನ್ನ ಪ್ರಿಯ ಸಹೋದರ ಮತ್ತು ಸಹೋದರಿಯರೇ, ನಮ್ಮನ್ನು ಪಾಪದ ಬಂಧನದಿಂದ ರಕ್ಷಿಸಲೂ ಮತ್ತು ನಮ್ಮನ್ನು ಆತನ ಕಡೆಗೆ ಸೆಳೆಯುವಂತೆಯೂ ದೇವರು ತನ್ನ ಒಬ್ಬನೇ ಮಗನನ್ನು ಶರೀರಧಾರಿಯಾಗಿ ಈ ಲೋಕಕ್ಕೆ ಕಳುಹಿಸಿಕೊಟ್ಟನು. (1ತಿಮೋ 3:16).

ನಾವು ಸಂಪೂರ್ಣವಾಗಿ ಹೇಗೆ ಪಾಪವನ್ನು ನಾಶ ಮಾಡುವದು?

**"....... ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ".** (ಇಬ್ರಿ 9:22)

ರಕ್ತದಿಂದ ಮಾತ್ರ ಮನುಷ್ಯನು ಪಾಪ ಹೇಗೆ ನಿರ್ಮೂಲ

ಯೆಹೋವನೇ, ನನ್ನ ಮನಸ್ಸು ಎಡೆಬಿಡದೆ ನಿನ್ನನ್ನು ಕೀರ್ತಿಸುತ್ತಿರುವದು; ನನ್ನ ದೇವರೇ, ನಿನ್ನನ್ನು ಸದಾಕಾಲವೂ ಸ್ತುತಿಸುವೆನು (ಕೀರ್ತ. 30:12).

ಮಾಡುವುದು? ಸತ್ಯವೇದ ಹೀಗೆ ಹೇಳುತ್ತದೆ, **"ಯಾಕಂದರೆ ಪ್ರತಿ ದೇಹಿಗೂ ರಕ್ತವೇ ಪ್ರಾಣಾಧಾರ ....... ರಕ್ತವು ಪ್ರಾಣಧಾರವಾಗಿರುವ ಕಾರಣ ಆದರಿಂದ ದೋಷ ಪರಿಹಾರವಾಗುತ್ತಷ್ಟೆ......... ಯಾಕಂದರೆ ಪ್ರತಿ ದೇಹಿಗೂ ರಕ್ತವೇ ಪ್ರಾಣಧಾರವಾಗಿದೆ"**. (ಯಾಜಕ 17:11,14).

ಮಾನವ ಕುಲವನ್ನು ಪಾಪದ ಬಂಧನದಿಂಧ ಬಿಡಿಸುವ ಉದ್ದೇಶದಿಂದ ಕ್ರಿಸ್ತನು ಮನುಷ್ಯನ ರೂಪವನ್ನು ತಾಳಿ ರುಧೀರವನ್ನು ಸುರಿಸಿದನು. ದೇವರೇ ಈ ಲೋಕಕ್ಕೆ ಶಿಶುವಾಗಿ ಬಂದ ಯೇಸುವು ಹೇಗೆ ನಮ್ಮ ಪಾಪವನ್ನು ಕ್ಷಮಿಸಿ, ಆತನನ್ನು ಸ್ವೀಕರಿಸಿಕೊಂಡವರಿಗೆ ಹೇಗೆ ಪವಿತ್ರಾತ್ಮನನ್ನು ತುಂಬಿದನು ಮತು ಹೇಗೆ ಅವರನ್ನು ಆಶೀರ್ವದಿಸಿದನು. ಎಂಬುದನ್ನು ಧ್ಯಾನ ಮಾಡೋಣ.

**1. ಪಾಪಗಳ ಕ್ಷಮಾಪಣೆ.**

**"...... ಪಾಪ ಮಾಡದ ಮನುಷ್ಯನು ಒಬ್ಬನೂ ಇಲ್ಲ"** ಎಂಬುದಾಗಿ ಅರಸನಾದ ಸೊಲೊಮೋನನು ಹೀಗೆ ಗೋಳಾಡುವುದನ್ನು ನೋಡುತ್ತೇವೆ (1ಅರಸು 8:46)

ಹೌದು ಮನುಷ್ಯನ ರಕ್ತದಲ್ಲಿ ಪಾಪವುಂಟು ಮತ್ತು ಒಬ್ಬನ ರಕ್ತದಿಂದ ಮತ್ತೊಬ್ಬನ ಪಾಪವನ್ನು ಶುದ್ಧಿ ಮಾಡಲು ಸಾಧ್ಯವಿಲ್ಲ. ಆದರೆ ಯೇಸುಕ್ರಿಸ್ತನ ರಕ್ತವು ಶುದ್ಧವಾಗಿರುತ್ತದೆ ಮತ್ತು ಯಾವ ಪಾಪವೂ, ದೋಷಣೆಯೂ ಇಲ್ಲದ್ದು ( 1 ಪೇತ್ರ 1:19). ಅದಕ್ಕೋಸ್ಕರವೇ ಯೇಸು ಈ ರೀತಿ ಹೇಳಿರುತ್ತಾನೆ, **"ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ? ನಾನು ಸತ್ಯವನ್ನು ಹೇಳುವವನಾಗಿರುವಲ್ಲಿ ನೀವು ನನ್ನ ಮಾತನ್ನು ನಂಬದೆ ಇರುವದು ಯಾಕೆ?"** ( ಯೋಹಾನ 8:46). ಕಲ್ವಾರಿ ಕ್ರೂಜೆಯ ಮೇಲೆ ಆತನು ತನ್ನ ಶುದ್ಧವಾದ ಮತ್ತು ಪವಿತ್ರವಾದ ರಕ್ತವನ್ನು ಸುರಿಸಿದನು, ಅದು ಪೂರ್ತಿ ಮಾನವ ಕುಲದ ಪಾಪಗಳನ್ನೇ ಅಳಿಸಿ ಬಿಡುವಂತಹ ಶಕ್ತಿಯುಳ್ಳದ್ದಾಗಿದೆ.

ಒಮ್ಮೆ ಮನೆ ಕಟ್ಟುವ ಕೆಲಸಗಾರರು ಸುಣ್ಣದ ಗೋಡೆಯನ್ನು ಮನೆಕಟ್ಟುವುದಕ್ಕೆ ಸಿದ್ಧಪಡಿಸಿಕೊಂಡಿದ್ದರು. ಅಲ್ಲಿ ಹತ್ತಿರದಲ್ಲಿಯೇ ಕೆಲವು ಮಕ್ಕಳು ಆಟವಾಡುತಿದ್ದರು ಮತ್ತು ಹಾಗೆಯೇ ಒಬ್ಬ ಚಿಕ್ಕ ಹುಡುಗನು, ಜಾರಿ ಅದರೊಳಗೆ ಬಿದ್ದು ಬಿಟ್ಟನು. ಆ ಸುಣ್ಣದ ನೀರು ಅವನ ಕಣ್ಣುಗಳೊಳಗೆ ಹೊಕ್ಕಿ ಕಣ್ಣಿನೊಳಗೆ ಸೇರಿಕೊಂಡು ಆ ಸಣ್ಣ ಹುಡುಗನಿಗೆ ತಡೆಯಲಾರದಂತಹ ಉರಿಯುಂಟಾಯಿತು. ಆ ಹುಡುಗನ ಕೂಗನ್ನು ಕೇಳಿದ ಅವನ ತಾಯಿಯು ಅವನಲ್ಲಿಗೆ ಓಡಿ ಬಂದಳು ಮತ್ತು ಅಲ್ಲಿದ್ದ ಜನರು ಅವರ ಹಳ್ಳಿಯ ವೈದ್ಯನನ್ನು ಕರೆತಂದರು. ಆ ಹಳ್ಳಿಯ ವೈದ್ಯನು ಅಲ್ಲಿನ ಗಂಭೀರ ಪರಿಸ್ಥಿತಿಯನ್ನು ನೋಡಿ, ಅಲ್ಲಿದ್ದ ಜನರಿಗೆ ಒಂದು ಮೇಕೆ ಅಥವಾ ಹಸುವನ್ನು ತೆಗೆದುಕೊಂಡು ಬನ್ನಿರಿ ಎಂದು ಹೇಳಿದನು. ಆ ಪ್ರಾಣಿಯ ರಕ್ತವನ್ನು ಈ ಹುಡುಗನ ಕಣ್ಣಿನಲ್ಲಿ ಸುರಿದರೆ, ಆವಾಗ ಕಣ್ಣಿನಲ್ಲಿರುವ ಸುಣ್ಣದ ನೀರನ್ನು ಶುಚಿ ಮಾಡುತ್ತದೆ ಮತ್ತು ಹುಡುಗನ ಕಣ್ಣಿನ ದೃಷ್ಟಿಯು ಸರಿಹೋಗುತ್ತದೆ ಎಂದು ಹೇಳಿದನು. ಈ ಮಾತನ್ನು ಕೇಳಿದ ಹುಡುಗನ ತಾಯಿಯು, **"ಸ್ವಾಮಿ, ಇಂತಹ ತುರ್ತು ಪರಿಸ್ಥಿತಿಯಲ್ಲಿ ಹೇಗೆ ಮೇಕೆ ಅಥವಾ ಹಸುವನ್ನು ಇಲ್ಲಿಗೆ ತರುವುದು?" ನೀವು ಬೇಕಾದರೆ ನನ್ನ ಬೆರಳನ್ನು ಕತ್ತರಿಸಿ, ನಿಮಗೆ ಎಷ್ಟು ಬೇಕಾದಷ್ಟು ರಕ್ತವನ್ನು ತೆಗೆದುಕೊಂಡು ನನ್ನ ಮಗನ ಕಣ್ಣುಗಳನ್ನು ಗುಣಪಡಿಸಿ"** ಎಂದು ಬೇಡಿಕೊಂಡಳು. ಆ ವೈದ್ಯನು ಬೇರೆ ವಿಧಿಯೆ ಇಲ್ಲದೆ, ಆ ತಾಯಿಯ ಬೆರಳಲ್ಲಿ ರಕ್ತ ತೆಗೆದು, ಆ ಹುಡುಗನ ಕಣ್ಣುಗಳ ಮೇಲೆ ಸುರಿದನು. ಅವಳ ರಕ್ತವು ಆ ಹುಡುಗನ ಕಣ್ಣಿನ ಮೇಲೆ ತೊಟ್ಟು ಹಾಕುತ್ತಿರುವಾಗ, ತಾಯಿಯು ಬಹಳ ಅನುಕಂಪದಿಂದ **"ಮಗನೇ, ಕಣ್ಣಿನ ಉರಿನಿಂತುಹೋಯಿತೋ ಅಥವಾ ಇನ್ನೂ ಸ್ವಲ್ಪ ರಕ್ತಸುರಿಸಲೋ?"** ಎಂದು ಕೇಳಿದಳು.

ತಾಯಿಯ ರಕ್ತವು ಮಗನ ಕಣ್ಣಿನಲ್ಲಿ ಬಿದ್ದು ಸುಣ್ಣದ ನೀರಿನ ಉರಿತ ಸಂಪೂರ್ಣವಾಗಿ ನಿಂತುಹೋಯಿತು. ತಾಯಿಯ ಪ್ರೀತಿಯು ಮಗನ ನೋವನ್ನು ಗುಣಪಡಿಸುವದಕ್ಕೆ ಎಷ್ಟು ಬೇಕೊ ಅಷ್ಟು ರಕ್ತಸುರಿಸಿ ಅವನನ್ನು ಗುಣಪಡಿಸಿತು.

ನಮ್ಮ ರಕ್ಷಕನಾದ ಕ್ರಿಸ್ತನು ಸಹ ಅದೇ ರೀತಿಯಾಗಿ ಮಾಡಿದನು, ಕೇವಲ ಒಂದು ಮಗುವಿಗಾಗಿ ಅಲ್ಲ ಆದರೆ ಪೂರ್ಣ ಜನಾಂಗಕ್ಕೆ ಮಾಡಿದನು. ಕರ್ತನಾದ ಯೇಸು ತಾನು ಹಿಡಿದುಕೊಡಲ್ಪಟ್ಟ ರಾತ್ರಿ ರೊಟ್ಟಿಯನ್ನು ತೆಗೆದುಕೊಂಡು, ಸ್ತೋತ್ರ ಮಾಡಿದ ನಂತರ, ಅವನು ಅದನ್ನು ಮುರಿದು ಹೀಗೆಂದನು; **"ಇದು ನಿಮಗೋಸ್ಕರವಾಗಿ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಈ ಪಾತ್ರೆಯನ್ನು ನನ್ನ ರಕ್ತದಿಂದ ಸ್ಥಾಪಿತವಾಗಿರುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನ ಮಾಡುವಾಗೆಲ್ಲಾ ನನ್ನನ್ನು ನೆನೆಸಿಕೊಳ್ಳುವದಕೋಸ್ಕರ ಪಾನ ಮಾಡಿರಿ ಅಂದನು"** (1 ಕೊರಿ. 11:23–25).

ಮೇಲೆ ಹೇಳಿದ ಸ್ತ್ರೀಯು ಕೇವಲ ಅವಳ ಮಗನಿಗಾಗಿ ರಕ್ತ ಸುರಿದಳು. ಆದರೆ ಕ್ರಿಸ್ತನು ತನ್ನ ರಕ್ತವನ್ನು ಇಡೀ ಮಾನವ ಕುಲಕ್ಕೆ ರಕ್ತ ಸುರಿಸಿದನು ಮತ್ತು ನಮ್ಮ ಎಲ್ಲಾ ಪಾಪಗಳನ್ನು ಹೊತ್ತುಕೊಂಡನು. **"ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು"** (ಯೆಶಾ. 53:5). ಯೇಸುವು ಸ್ವಯಂ ಪ್ರೇರಿತನಾಗಿ ನಮಗಾಗಿ ತನ್ನ ರಕ್ತವನ್ನು ಸುರಿಸಿದಾಗ್ಯೂ, ಒಬ್ಬ ರೋಮನರ ಸಿಪಾಯಿಯು

ನನ್ನನ್ನು ಪ್ರೀತಿಸುವವರಿಗೆ ಧನದ ಬಾಧ್ಯತೆಯನ್ನು ದೊರಕಿಸಿ ಅವರ ಬೊಕ್ಕಸಗಳನ್ನು ತುಂಬಿಸುವೆನು (ಜ್ಞಾನೋ. 8:21).

ತನ್ನ ಈಟಿಯಿಂದ ಅವನ ಪಕ್ಕೆಯನ್ನು ತಿವಿದು, ಆತನ ದೇಹದಿಂದ ರಕ್ತದ ಕಡೆ ತೊಟ್ಟನ್ನು ಹೊರತೆಗೆದನು (ಯೋಹಾ. 19:9–34).

ಸತ್ಯವೇದ ಹೇಳುತ್ತದೆ, **"ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ"** (1 ಯೋಹಾ. 1:7).

ಅದೃಶ್ಯನಾದ ದೇವರು ಈ ಲೋಕಕ್ಕೆ ಶಿಶುವಾಗಿ ಯಾಕೆ ಬಂದನು? ಅದು ಯಾಕಂದರೆ, ಆತನು ನಮ್ಮ ರಕ್ಷಣೆಗಾಗಿಯೂ, ಲೋಕದ ಎಲ್ಲಾ ಪಾಪಿಗಳ ರಕ್ಷಣೆಗಾಗಿಯೂ ತನ್ನ ಪ್ರಾಣವನ್ನು ಕೊಟ್ಟನು. ಆತನು ಸುರಿಸಿದ ರಕ್ತವು ಎಲ್ಲಾ ಮಾನವರಿಗೆ ಸುರಿಸಿದ ದೇವರ ಸ್ವರಕ್ತವಾಗಿದೆ (ಅಪೊ. 20:28). ಆದುದರಿಂದ ಇದು ಎಲ್ಲಾ ಜನಾಂಗಕ್ಕೆ ಅಂದರೆ ಜಾತಿ, ಮತ, ಭಾಷೆಗಳ ಭೇದ ಭಾವನೆಯಿಲ್ಲದೆ ಅನ್ವಯಿಸುತ್ತದೆ.

ನಾವೆಲ್ಲರೂ ದೇವರಲ್ಲಿ ಪ್ರಾರ್ಥನೆ ಮಾಡಿ ಆತನಿಂದ ರಕ್ಷಣೆಯನ್ನು ಹೊಂದಿಕೊಳ್ಳೋಣ. **"ಪ್ರಿಯ ತಂದೆಯಾದ ಯೇಸು ಕ್ರಿಸ್ತನೇ, ಈ 2 ಸಾವಿರ ವರ್ಷಗಳ ಹಿಂದೆ ನೀನು ನಮ್ಮ ಪಾಪಗಳನ್ನು ಶುದ್ಧಿ ಮಾಡಲು ಮತ್ತು ಹೊಸ ಜೀವವನ್ನು ಕೊಡುವುದಕ್ಕೂ ಬಂದಿರುವೆ, ನೀನು ಅದಕ್ಕಾಗಿ ನಿನ್ನ ರಕ್ತವನ್ನು ಸುರಿಸಿ ನಮಗೆ ರಕ್ಷಣೆ ಕೊಟ್ಟೆ. ದಯವಿಟ್ಟು ನನಗೂ ಸಹ ಈ ಹೊಸ ಅನುಭವವನ್ನು ದಯಪಾಲಿಸು"** ಎಂದು ಹೇಳಿ ರಕ್ಷಣೆಯನ್ನು ಪಡೆಯಿರಿ.

**2. ಪವಿತ್ರಾತ್ಮನಿಂದ ಅಭಿಷೇಕ ಹೊಂದುವದು :–** ನಮ್ಮ ಪಾಪಗಳಿಂದ ಕ್ಷಮಾಪಣೆ ಹೊಂದಿದ ನಂತರ ನಮ್ಮ ಹೃದಯಗಳಲ್ಲಿ ಒಂದು ದೈವಿಕವಾದ ಸಮಾಧಾನದ ಅನುಭವ ಬರುತ್ತದೆ ಮತ್ತು ಇಂಥಹ ಅನುಭವ ಈ ಲೋಕದಲ್ಲಿ ಯಾವ ಕಾರಣ ದಿಂದಲಾದರೂ ಬೇರೆ ಎಲ್ಲೂ ದೊರಕುವದಿಲ್ಲ. ಈ ದೈವೀಕ ಸಮಾಧಾನ ಎಂತಹುದು ಅಂದರೆ, ಅದು ನಮ್ಮ ಹೃದಯಗಳ ಒಳಭಾಗದಲ್ಲಿ [ಎಲ್ಲಾ] ತೋರುತ್ತದೆ ಮತ್ತು ನಾವು ದೇವರ ಮಕ್ಕಳೆಂಬ ಭರವಸೆವುಂಟು ಮಾಡುತ್ತದೆ ಮತ್ತು ನಿಮ್ಮ ಬೇಡಿಕೆಗಳನ್ನೆಲ್ಲಾ ಈಡೇರಿಸುತ್ತದೆ. ಕರ್ತನಾದ ದೇವರು, ಇದರ ಜೊತೆಗೆ, ನಾವು ಪವಿತ್ರಾತ್ಮನಿಂದ ಅಭಿಷೇಕ ಹೊಂದಬೇಕೆಂದು ಸಹ ಆಶಿಸುತ್ತಾನೆ (ಎಫೆ. 5:17–18). ಆತನು ಈ ಲೋಕದಲ್ಲಿ ಹುಟ್ಟಿದ್ದ ಉದ್ದೇಶವು ಇದೇ ಆಗಿರುತ್ತದೆ.

ನಾವು ಕ್ರಿಸ್ತನ ರಕ್ತದಿಂದ ಶುದ್ಧಿಹೊಂದಿದ ನಂತರವೂ ಸಹ, ನಾವು ಕೆಲವು ಭಾರಿ ನಮ್ಮ ಹಳೆ ಶೋಧನೆಗಳಿಗೆ ಗುರಿಯಾಗುವ ಸಂದರ್ಭಗಳುಂಟು. ನಮಗೆ ತಿಳಿಯದ ರೀತಿಯಲ್ಲಿ ಈ ನಮ್ಮ ಹಳೆಯ ಬಲಹೀನತೆಗಳು ನಮ್ಮ ಜೀವಿತದಲ್ಲಿ ಉದಯಿಸುವುದು ಸಹಜವಾಗಿರುತ್ತದೆ.

ಈ ರೀತಿಯಾಗುವಂತಹ ಸನ್ನಿವೇಶಗಳನ್ನು ತಡೆಹಿಡಿಯುವ ಕಾರಣದಿಂದ ನಾವು ಪವಿತ್ರಾತ್ಮ ಪ್ರೇರಿತರಾಗಬೇಕೆಂದು ಯೇಸುಕ್ರಿಸ್ತನು ಬಯಸುತ್ತಾನೆ, ಯಾಕಂದರೆ ಪವಿತ್ರಾತ್ಮನು ಆತನನ್ನು ಸಹ ಪರಿಶುದ್ಧವಾಗಿಟ್ಟಿದ್ದನು. ಪವಿತ್ರಾತ್ಮನು ನಮ್ಮ ಆತ್ಮಗಳಲ್ಲಿ ಒಮ್ಮೆ ಪ್ರವೇಶಿಸಿದಾಗ, ಅದು ನಮ್ಮಲ್ಲಿರುವ ಎಲ್ಲಾ ಪಾಪಗಳನ್ನು ಮತ್ತು ದುಷ್ಟ ಅಭ್ಯಾಸಗಳನ್ನು ಬೇರು ಸಮೇತ ನಾಶ ಮಾಡುತ್ತದೆ (ಯೆಶಾ. 4:3–4).

ನಮ್ಮ ಪಾಪಗಳಿಂದ ಶುದ್ಧಿ ಮಾಡಲು ಆತನು ಈ ಲೋಕಕ್ಕೆ ಬಂದನು. ಆದರೆ ನಮ್ಮನ್ನು ಪವಿತ್ರಾತ್ಮನಿಂದ ಅಭಿಷೇಕಿಸುವ ಮೊದಲು ಆತನು ಈ ರೀತಿ ನುಡಿದನು: **"ಆದರೆ ನಾನು ಹೊಂದತಕ್ಕ ದೀಕ್ಷಾಸ್ನಾನ ಒಂದುಂಟು. ಅದು ನೆರವೇರುವ ತನಕ ನಾನು ಎಷ್ಟೋ ಬಿಕ್ಕಟ್ಟಿನಲ್ಲಿದ್ದೇನೆ."** (ಲೂಕ. 12:50). ಸಿಪಾಯಿಗಳೊಂದಿಗೆ ಗೆತ್ಸೇಮನೆ ತೋಟಕ್ಕೆ ಬಂದನು. ಯೇಸು ಕ್ರಿಸ್ತನು ಮನೋವ್ಯಥೆಯುಳ್ಳವನಾಗಿ ಪ್ರಾರ್ಥಿಸುತ್ತಿರುವಾಗ, ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು (ಲೂಕ. 22:44). ಕೊನೆಯದಾಗಿ, ಆತನು ಶಿಲುಬೆಯ ಮೇಲೆ ಪ್ರಾಣವನ್ನು ನೀಡಿದಾಗ, ಆತನು ತನ್ನ ತಂದೆಯಾದ ಕರ್ತನಿಗೆ ಪ್ರಾರ್ಥನೆ ಮಾಡುತ್ತಾ ಈ ಮಾನವ ಕುಲದ ರಕ್ಷಣೆಗಾಗಿ ತನ್ನನ್ನೇ ಯಜ್ಞದ ಪಶುವಾಗಿ ಅರ್ಪಿಸಿರುವುದಾಗಿಯೂ ಮತ್ತು ಇದಕ್ಕಿಂತಲೂ ಉತ್ತಮವಾದ ತ್ಯಾಗ ಬೇರೆ ಯಾವುದು ಇಲ್ಲವೆಂತಲೂ ಹಾಗೂ ಇದನ್ನು ಬಯಸಿದವರಿಗೆಲ್ಲರಿಗೂ ಪವಿತ್ರಾತ್ಮನ ಅಭಿಷೇಕವಾಗಲೆಂದು ಆತನು ದೇವರಲ್ಲಿ ಬೇಡಿಕೊಂಡನು.

ಒಬ್ಬ ಕ್ರಿಸ್ತನನ್ನು ಅರಿಯದ ಯೌವನಸ್ಥನು, ತನ್ನ ಜೀವನದ ಮಾರ್ಗವನ್ನು ಹುಡುಕುತ್ತಾ ಒಂದು ನಿರ್ಧಿಷ್ಟವಾದ ಊರಿಗೆ ಹೋದನು. ಅವನಿಗೆ ಆ ಊರಿನ ರಾಜಕುಮಾರನ ಮನೆಯಲ್ಲಿ ಕೆಲಸ ದೊರಕಿತು ಮತ್ತು ರಾಜಕುಮಾರನಿಗೂ ಕ್ರಿಸ್ತನ ಬಗ್ಗೆ ತಿಳಿದಿರಲಿಲ್ಲ.

ಆ ಯೌವನಸ್ಥನು ಈ ಲೋಕದ ಸಮಸ್ಯೆಗಳನ್ನು ಎದುರಿಸಲು ಅಸಮರ್ಥನಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಆಲೋಚನೆ ಬಂದಿತು. ಅದೇ ಸಮಯದಲ್ಲಿ ಕ್ರಿಸ್ತನು ಅವನಿಗೆ ಪ್ರತ್ಯಕ್ಷನಾದನು ಮತ್ತು ಲೋಕವೇ ನೀಡಲಾಗದ ಸಮಾಧಾನವನ್ನು ಆ ಯೌವನಸ್ಥನಿಗೆ ದಯಪಾಲಿಸುವುದಾಗಿ ಹೇಳಿದನು ಮತ್ತು ಅದೇ ರೀತಿಯಲ್ಲಿ ಅನುಗ್ರಹಿಸಿದನು. ಆದರೆ ಯೌವನಸ್ಥನು ದೇವರಿಂದ ಮಾನಸಿಕ ಸಮಾಧಾನ ಪಡೆದಿದ್ದಾಗ್ಯೂ, ಅವನು ತನ್ನ ಹಳೆಯ ಮಾರ್ಗಕ್ಕೆ ಶೋಧಿತನಾಗಬಾರದೆಂದು ದೇವರಲ್ಲಿ ಬೇಡಿಕೊಂಡನು. ಆದುದರಿಂದ ದೇವರು ಅವನನ್ನು ಪವಿತ್ರಾತ್ಮನಿಂದ ತುಂಬಿಸಿದನು. ಇದಾದ ನಂತರ ತಕ್ಷಣವೇ, ಆ ಯೌವನಸ್ಥನು, **"ನನ್ನ ಯಜಮಾನನು ದೇವರನ್ನರಿಯದ ಕ್ರೂರ ಮನುಷ್ಯನು, ದಯವಿಟ್ಟು ಅವನು ಸಹ ಪರಿವರ್ತನೆಯಾಗುವಂತೆ ಮಾಡು"** ಎಂದು ಹೇಳಿದನು.

ದಿನಗಳು ಕಳೆದವು. ಒಂದು ದಿನ ರಾಜ ಕುಮಾರನು

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು (ಜ್ಞಾನೋ. 8:17).

ಖಾಯಿಲೆಯಾಗಿ, ಬಹಳ ದೈಹಿಕ ಸಂಕಟದಿಂದ ನರಳಾಡುತ್ತಿದ್ದನು. ಆ ಖಾಯಿಲೆಯ ಹಾಸಿಗೆಯ ಬಳಿ ಇದ್ದ ಯೌವನಸ್ಥನಿಗೆ ತನ್ನ ಯಜಮಾನನಾದ ರಾಜಕುಮಾರನಿಗೆ ಪ್ರಾರ್ಥನೆ ಮಾಡಬೇಕೆಂಬ ಪ್ರೇರಪಣೆ ದೇವರಿಂದ ಉಂಟಾಯಿತು. ಈ ಯುವಕನು ತಾನು ಪ್ರಾರ್ಥನೆ ಮಾಡಬಹುದೇ ಎಂದು ರಾಜಕುಮಾರನಲ್ಲಿ ಕೇಳಿದಾಗ, ರಾಜಕುಮಾರನು ಸಮ್ಮತಿಸಿದನು.

ಈ ಯುವಕನು ಈಗಾಗಲೇ ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟವನಾದರಿಂದ, ಅವನು ರಾಜಕುಮಾರನಿಗಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸಿದಾಗ, ದೇವರ ಬಲ ರಾಜಕುಮಾರನ ಮೇಲೆ ಇಳಿದು ಬಂದಿತು ಮತ್ತು ಅವನು ಖಾಯಿಲೆಯಿಂದ ಕೂಡಲೆ ಗುಣಹೊಂದಿದನು. ರಾಜಕುಮಾರನು ಹಾಸಿಗೆಯ ಮೇಲೆ ಎದ್ದು ಕೂತುಕೊಂಡು, ಆ ಯುವಕನಿಗೆ ಕೃತಜ್ಞತೆಯನ್ನು ತೋರಿಸುವಾಗ ಅವನನ್ನು ತಬ್ಬಿಕೊಂಡನು. ರಾಜಕುಮಾರನು ಅಲ್ಲಿ ಸುತ್ತಮುತ್ತಲು ಇರುವವರಿಗೆ ತಾನು ಹೇಗೆ ಯುವಕನ ಪ್ರಾರ್ಥನೆ ಬಲದಿಂದ ಗುಣಹೊಂದಿರುವುದಾಗಿ ವರ್ಣಿಸಿದಾಗ, ಅದನ್ನು ಕೇಳಿದವರೆಲ್ಲರೂ ಪ್ರಾರ್ಥನೆಗಾಗಿ ಆ ಯುವಕನನ್ನು ಸಂಧಿಸಲು ಪ್ರಾರಂಭಿಸಿದರು. ಅವನು ಎಲ್ಲರ ಮೇಲೆ ಹಸ್ತಾರ್ಪಣೆ ಮಾಡಿ ಪ್ರಾರ್ಥಿಸಿದನು. ಈ ಯುವಕನು ಪ್ರಾರ್ಥನೆ ಮಾಡಿದವರೆಲ್ಲರು ಗುಣಹೊಂದಿದರು ಮತ್ತು ಪ್ರಾಪಂಚಿಕ ಆಸೆಗಳಿಂದ ಅನೇಕರು ಬಿಡುಗಡೆ ಹೊಂದಿದರು.

ಹೌದು ! ನಮ್ಮೆಲ್ಲರಿಗೂ ಪವಿತ್ರಾತ್ಮನ ಅಭಿಷೇಕವಾಗಬೇಕೆಂಬ ಉದ್ದೇಶದಿಂದಲೇ ದೇವರು ಈ ಲೋಕಕ್ಕೆ ಮನುಷ್ಯನ ರೂಪದಲ್ಲಿ ಇಳಿದುಬಂದನು. ನಾವು ಪವಿತ್ರಾತ್ಮನಿಂದ ತುಂಬಲ್ಪಟ್ಟಾಗ, ದೇವರು ನಮಗೆ ದೈವಿಕ ಜೀವನವನ್ನು ಸಾಗಿಸುವಂತೆ ಸಹಾಯ ಮಾಡುತ್ತಾನೆ. ನಾವು ಬೇರೆಯವರಿಗೆ ಆಶೀರ್ವಾದದ ಕಾಲುವೆಯಾಗಿ, ದೇವರ ಪಾತ್ರೆಯಾಗಿ ಜೀವಿಸುವ ಉದ್ದೇಶದಿಂದ ನಮ್ಮನ್ನು ಆತನು ನಡೆಸುತ್ತಾನೆ.

**ಪರಿಪೂರ್ಣ ಆಶೀರ್ವಾದಗಳು :**

**"ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು"** (2 ಕೊರಿ. 8:9). ಮೇಲೆ ಹೇಳಿರುವ ವಾಕ್ಯದಲ್ಲಿ ಒಂದು ಪರಿಪೂರ್ಣವಾದ ಸತ್ಯಉಂಟು. ಪರಲೋಕದಲ್ಲಿ ಕ್ರಿಸ್ತನು ಐಶ್ವರ್ಯವಂತನಾಗಿದ್ದನು. ಆದರೆ ನಮ್ಮ ಪಾಪಮಯವಾದ ಜೀವಿತದಲ್ಲಿ ಕಳೆದುಕೊಂಡ ಶಿಷ್ಟತನವನ್ನು ಕೊಡುವನು ಮತ್ತು ನಮ್ಮನ್ನು ಐಶ್ವರ್ಯವಂತರನ್ನಾಗಿ ಮಾಡಲು ಆತನು ಮನುಷ್ಯನ ರೂಪವನ್ನು ತಾಳಿದನು. ಆತನು ನಮಗೋಸ್ಕರ ಬಾಧೆಯನ್ನು ಅನುಭವಿಸಿದನು, ಆತನಿಗೆ ತಲೆಯಿಟ್ಟು ವಿಶ್ರಮಿಸಿಕೊಳ್ಳಲು ಸ್ಥಳವಿರಲಿಲ್ಲ (ಲೂಕ 9:58). ಆತನು ಈ ಲೋಕದಲ್ಲಿ ಸುವಾರ್ತೆಯನ್ನು ಸಾರುತ್ತಿರುವಾಗ ಆತನ ಸಂಗಡ ಹನ್ನೆರಡು ಮಂದಿ ಶಿಷ್ಯರು ಇದ್ದರು; ಕೆಲವರು ಆತನ ಸ್ಪರ್ಶದಿಂದ ಅದ್ಭುತ ಗುಣ ಹೊಂದಿದರು; ಇನ್ನು ಕೆಲವರು ಆತನೊಂದಿಗೆ ಸೇವೆ ಮಾಡಲು ತಮ್ಮಲ್ಲಿ ಇದ್ದಂತಹ ಸ್ವತ್ತನ್ನು ಮಾರಿ ಅದರಿಂದ ಬಂದ ಹಣವನ್ನು ಅವನಿಗೆ ಕೊಟ್ಟು ಉಪಚಾರ ಮಾಡುತ್ತಿದ್ದರು (ಲೂಕ 8:1–3). ಆತನು ಶಿಲುಬೆಯ ಮೇಲೆ ಇದ್ದಾಗಲು ಸಿಪಾಯಿಗಳು ಮಾಡಿದ್ದನ್ನು ಈ ರೀತಿ ಬರೆದಿರುತ್ತದೆ, **"ಆತನ ಮೇಲುಹೊದಿಕೆಗಳನ್ನು ತಕ್ಕೊಂಡು ನಾಲ್ಕು ಪಾಲು ಮಾಡಿ ಒಬ್ಬೊಬ್ಬ ಸಿಪಾಯಿಗೆ ಒಂದೊಂದು ಪಾಲಿನ ಪ್ರಕಾರ ಹಂಚಿಕೊಂಡರು. ಆತನ ಒಳಂಗಿಯನ್ನು ಚೀಟಿ ಹಾಕಿದರು"** (ಯೋಹಾನ 19:23–24). ಸತ್ಯವೇದದಲ್ಲಿ ಈ ರೀತಿ ಹೇಳಿರುತ್ತದೆ : **"ಕುಡುಕನೂ ಹೊಟ್ಟೆಬಾಕನೂ ದುರ್ಗತಿಗೆ ಬರುವರು; ನಿದ್ರಾಸಕ್ತಿಯು ಹರಕು ಬಟ್ಟೆಗಳನ್ನು ಹೊದಿಸುವದು"** (ಜ್ಞಾನೋ. 23:21). ದೇವರು ಬಡತನದಲ್ಲಿ ಹಾದು ಹೋದನು, ಯಾಕಂದರೆ ಶಿಷ್ಟತನ ಮತ್ತು ಐಶ್ವರ್ಯವನ್ನು ಕಳೆದುಕೊಂಡವರು ಮತ್ತೇ ಒಳ್ಳೆಯತನ ಮತ್ತು ಐಶ್ವರ್ಯವನ್ನು ಪಡೆಯಲೆಂದು ಮಾಡಿದನು.

ನಾವು ಸತ್ಯವೇದದಲ್ಲಿ ನೋಡುತ್ತೇವೆ ಕರ್ತನು 5000 ಜನರಿಗೆ ಐದು ರೊಟ್ಟಿ ತುಂಡುಗಳಿಂದಲೂ, 4000 ಜನರಿಗೆ ಏಳು ರೊಟ್ಟಿ ತುಂಡುಗಳಿಂದಲೂ ಊಟ ಮಾಡಲು ಕೊಟ್ಟನು ಮತ್ತು ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಅವುಗಳು ಮೊದಲನೆಯ ಸ್ಥಳದಲ್ಲಿ ಹನ್ನೆರಡು ಪುಟ್ಟಿಗಳು ಮತ್ತು ಎರಡನೆಯ ಸ್ಥಳದಲ್ಲಿ ಏಳು ಪುಟ್ಟಿಗಳು ತುಂಬಿತು (ಮತ್ತಾ. 14:20, 15:37). ಈ ಲೋಕದಲ್ಲಿ ಯೇಸುಕ್ರಿಸ್ತನು ನಮ್ಮ ಕೊರತೆಗಳನ್ನು ಮತ್ತು ನ್ಯೂನ್ಯತೆಗಳನ್ನು ತೆಗೆದು ಹಾಕಿ ಪರಿಪೂರ್ಣ ಆಶೀರ್ವಾದಗಳನ್ನು ಅನುಗ್ರಹಿಸಲು ಬಂದನು.

ದೇವರು ಒಬ್ಬ ಭಕ್ತನಿಗೆ ಪ್ರತ್ಯಕ್ಷನಾಗಿ, ಒಂದು ಕ್ರಿಸ್ತೀಯ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುವಂತೆ ತಿಳಿಸಿದನು. ಅದೇ ಪ್ರಕಾರ ಆ ಭಕ್ತನು ದೇವರ ಚಿತ್ತವನ್ನು ನೆರವೇರಿಸುವ ಒಂದೇ ಉದ್ದೇಶದಿಂದ ಈ ಬೃಹತ್ ಕಾರ್ಯಕ್ಕೆ ಬೇಕಾಗುವ ಹಣವನ್ನು ಅಂದಾಜು ಮಾಡಿ ನೋಡಿದಾಗ, ಅಷ್ಟೊಂದು ಹಣ ಬೇಕಾಗಿರುವುದನ್ನು ನೋಡಿ ದಿಗ್ಭ್ರಮೆಗೊಂಡನು. ಆದಾಗ್ಯೂ ಅವನು ಈ ದೇವರ ಕಾರ್ಯವನ್ನು ಸಿದ್ಧಿಗೆ ತರಲು, ಬಹಿರಂಗವಾಗಿ ಪ್ರಕಟನೆಗಳನ್ನು ಮಾಡಿ ಉದಾರ ಹಣ ಮತ್ತು ಚಂದಾವಂತಿಕೆಗಳನ್ನು ಕೇಳಿದನು ಮತ್ತು ಅನೇಕರು ಅವನಿಗೆ ಬೆಂಬಲ ನೀಡದೆ ಈ ಬೃಹತ್ ಕಾರ್ಯವನ್ನು ಸಾಧಿಸಲು ಸಾಧ್ಯವಾಗದು ಎಂದು ಹೇಳಿ ಎದೆಗುಂದಿಸಿದರು. ಆದರೆ ಈ ರೀತಿ ನಿರುತ್ಸಾಹವನ್ನು ನೀಡಿದವರಿಗೆ ಅವನು ಹೇಳಿದ್ದೇನಂದರೆ, ತಾನು ಮನುಷ್ಯರ ಆಲೋಚನೆಯಂತೆ ನಡೆಯುವುದಿಲ್ಲ ಆದರೆ ದೇವರ ಕೈಯಲ್ಲಿ ಸಾಧ್ಯವಾಗದು ಒಂದೂ ಇಲ್ಲ ಎಂಬ ಮಾತಿನ ಮೇಲೆ ನಿಂತಿರುವುದಾಗಿ ಹೇಳುತ್ತಿದ್ದನು. ಅವನು ಈ ಕೆಳಗಿನ

ನನ್ನಲ್ಲಿ ಧನಘನತೆಗಳೂ ಶ್ರೇಷ್ಠಸಂಪತ್ತೂ ನೀತಿಯೂ ಇರುತ್ತವೆ.
(ಜ್ಞಾನೋ. 8:18).

ವಾಕ್ಯವನ್ನು ಒತ್ತಿ ಹೇಳುತ್ತಿದ್ದನು. **"ಭೂಮಿಯೂ ಅದರಲ್ಲಿರುವ ಸಮಸ್ತವೂ ಕರ್ತನದು, ಲೋಕವೂ ಅದರ ನಿವಾಸಿಗಳು ಆತನವೇ"** (ಕೀರ್ತ. 24:1). **"ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದವು; ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು"** (ಪ್ರಕ. 21:21). ಅದೇ ಪ್ರಕಾರ, ಅವನಿಗೆ ಭರವಸೆ ಇದೆ ಮತ್ತು ದೇವರು ತೋರಿಸಿದ ಕಾರ್ಯವನ್ನು ಸಾಧಿಸಲು ದೇವರು ಸಹಾಯ ಮಾಡುತ್ತಾನೆ ಎಂದು ಹೇಳುತ್ತಿದ್ದನು.

ದೇವರು ಅವನಲ್ಲಿದ್ದ ನಂಬಿಕೆಯನ್ನು ಘನಪಡಿಸಿದನು ಮತ್ತು ಆ ಭಕ್ತನಿಗೆ ಬೇಕಾದ ಹಣವನ್ನು ಒದಗಿಸಿಕೊಟ್ಟನು (ಎಫೆ. 3:20) ಮತ್ತು ಈ ಕಾರ್ಯವನ್ನು ಸಾಧಿಸಲು ತನ್ನ ಕೃಪೆಯನ್ನು ಅನುಗ್ರಹಿಸಿದನು.

ನನ್ನ ಪ್ರಿಯ ಸ್ನೇಹಿತರೇ, ನಿಮ್ಮ ಜೀವಿತದಲ್ಲೂ ಸಹ ದುರಾದೃಷ್ಟ ಮತ್ತು ದಾರಿದ್ರತನ ಬರಬಹುದು, ಆದರೆ ಅದರಲ್ಲಿಯೇ ಚಿಂತಿಸಬೇಡಿರಿ. ಕರ್ತನಾದ ಯೇಸುವು ಈಗಾಗಲೇ ಬಡತನದ ದಾರಿಯಲ್ಲಿ ಹಾದು ಹೋಗಿ ಅದನ್ನು ಜಯಿಸಿದ್ದಾನೆ. ಈ ದಿನದಂದು ಆತನಲ್ಲಿ ಇರುವ ಆಶೀರ್ವಾದಗಳನ್ನು ಕ್ರಿಸ್ತನು ನಮ್ಮ ಮೇಲೆ ಸುರಿಸುತ್ತಾನೆ ಎಂದು ನಾವು ನಂಬೋಣ. ಪ್ರಾರ್ಥನೆಗಳ ಮೂಲಕ ನಮ್ಮ ವಿಜ್ಞಾಪನೆಗಳನ್ನು ಕರ್ತನಿಗೆ ಸಲ್ಲಿಸೋಣ.

**"ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನು ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು, ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು"** (ಯೋಹಾ. 16:24). ಅದೇ ಪ್ರಕಾರ ನಾವು ಯಾವಾಗಲಾದರು ಆತನಲ್ಲಿ ಬೇಡಿಕೊಂಡಾಗ, ನಮ್ಮ ಕರ್ತನಾದ ದೇವರು ನಮ್ಮ ಅಗತ್ಯತೆಗಳನ್ನು ಪೂರೈಸುತ್ತಾನೆ ಮತ್ತು ನಮ್ಮನ್ನು ಸಂತೋಷ ಪಡಿಸುತ್ತಾನೆ.

ಈ ಲೋಕದಲ್ಲಿ ಕ್ರಿಸ್ತನ ಜನನದ ಉದ್ದೇಶವನ್ನು ನಾವು ಗಮನಿಸಿದಾಗ ಅದು ನಿಜಕ್ಕೂ ಅದ್ಭುತವೇ ಆಗಿರುತ್ತದೆ. ಆದುದರಿಂದ, ಈ ದಿನಗಳಲ್ಲಿ ಆತನು ಭೂಲೋಕಕ್ಕೆ ಬಂದಿರುವುದನ್ನು ನೆನೆಸಿಕೊಂಡು ಧ್ಯಾನ ಮಾಡೋಣ ಮತ್ತು ಆನಂದಿಸೋಣ. ಕರ್ತನಾದ ಯೇಸುವಿನಲ್ಲಿ ಪಾಪ ಕ್ಷಮಾಪಣೆಯನ್ನು ಹೊಂದಿ. ಪಾಪಗಳನ್ನು ಜಯಿಸಲು ಪವಿತ್ರಾತ್ಮನ ವರಗಳಿಗಾಗಿಯೂ, ಮತ್ತು ಪರಿಪೂರ್ಣ ಆಶೀರ್ವಾದಗಳಿಗಾಗಿಯೂ ಬೇಡಿಕೊಳ್ಳೋಣ.

ಈ ವರ್ಷದಲ್ಲಿ ಕರ್ತನಾದ ಯೇಸುವು ನಮಗೆ ರಕ್ಷಣೆಯನ್ನು ದಯಪಾಲಿಸಲಿ ಮತ್ತು ನಿಮ್ಮನ್ನು ಹಾಗೂ ನಿಮ್ಮ ಕುಟುಂಬದವರನ್ನು ಸಮೃದ್ಧಿಯಾಗಿ ಆಶೀರ್ವಾದಿಸಲಿ. ನಿಮ್ಮ ಮನೆಯಲ್ಲಿ ಯಾವಾಗಲೂ ಸಂತೋಷ ತುಂಬಿರಲಿ.

**ಲೇಖನ ಸಂಗ್ರಹ : ಜೇಮ್ಸ್ ಅಂಬ್ಲರ್, ಮಲ್ಪೆ.**

# ಹೊಸ ವರ್ಷದಲ್ಲಿ ಹೊಸ ಆಶೀರ್ವಾದ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

3) **ಪ್ರಾರ್ಥಿಸುವ ವ್ಯಕ್ತಿ ಆಶೀರ್ವಾದ ಹೊಂದುವನು :** (1 ಪೂರ್ವ. 4:10) ದೇವರಲ್ಲಿ ಭಯಭಕ್ತಿಯುಳ್ಳವನು ಆಶೀರ್ವಾದ ಹೊಂದುವನು (ಕೀರ್ತ. 128:4) ಯಾಬೇಚನು ವೇದನೆಯುಳ್ಳವನು ಆತನು ದೇವರಲ್ಲಿ ತನ್ನನ್ನು ವಿಶೇಷವಾಗಿ ಆಶೀರ್ವದಿಸಿ ನನ್ನ ಪ್ರಾಂತ್ಯವನ್ನು ವಿಸ್ತರಿಸು ಎಂದು ಮೊರೆಯಿಡಲು ದೇವರು ಆತನ ಮೊರೆಯನ್ನು ಲಾಲಿಸಿದನು. ಯಾಕೋಬನು ದೇವರನ್ನು ನೀನು ನನ್ನನ್ನು ಆಶೀರ್ವದಿಸದ ಹೊರತು ಬಿಡುವುದಿಲ್ಲ ಎಂದು ಹೋರಾಡಿದನು. ಅಲ್ಲಿಂದಲೇ ಯಾಕೋಬನೆಂಬ ಹೆಸರಿನಿಂದ ಇಸ್ರಾಯೇಲನಾಗಿ ದೇವರಿಂದ ಆಶೀರ್ವಾದ ಹೊಂದಿದನು. **'ದೇವರು ತನ್ನನ್ನು ನಿರೀಕ್ಷಿಸುವವರಿಗೂ, ಹುಡುಕುವವರಿಗೂ ಮಹೋಪಕಾರಿಯಾಗಿದ್ದಾನೆ'** (ಪ್ರಲಾ. 3:25). ಪ್ರಿಯ ದೇವ ಮಗುವೆ ನೀನು ದೇವರ ಸನ್ನಿಧಿಯಲ್ಲಿ ಸಮಯ ಕಳೆಯುವಿಯಾದರೆ ಆ ಸಮಯ ಎಂದಿಗೂ ವ್ಯರ್ಥವಾಗುವುದಿಲ್ಲ. **'ಚೀಯೋನಿನ ಆದಾಯವನ್ನು ದೇವರು ಆಶೀರ್ವದಿಸುವನು'** (ಕೀರ್ತ. 132:13). ಇಂದು ಅನೇಕರು ಸಭೆಯನ್ನು, ದೇವರ ಸನ್ನಿಧಿಯನ್ನು ತಾತ್ಸರಮಾಡಿ ದೇವರು ಇಟ್ಟಿರುವ ಆಶೀರ್ವಾದಗಳನ್ನು ಕಳೆದುಕೊಳ್ಳುವರು. ಭಾನುವಾರದ ಆರಾಧನೆಯನ್ನು ಬಿಟ್ಟು ಮದುವೆಗೂ, ಬರ್ತ್‌ಡೇ ಪಾರ್ಟಿಗೂ ತೆರಳುವರು. **"ನಿನ್ನ ಮಂದಿರದ ಸಮೃದ್ಧಿಯಿಂದ ಅವರನ್ನು ಸಂತೃಪ್ತಿಪಡಿಸುತ್ತಿ"** (ಕೀರ್ತ. 36:8). ದಾವೀದನು ಬರೆಯುತ್ತಾನೆ, **'ಯೆಹೋವನ**

**ಪುರಸ್ಕಾರ ಸ್ವರ**

ಯೆಹೋವನ ನಾಮವು ಬಲವಾದ ಬುರುಜು; ಶಿಷ್ಟನು ಅದರೊಳಕ್ಕೆ ಓಡಿಹೋಗಿ ಭದ್ರವಾಗಿರುವನು (ಜ್ಞಾನೋ. 18:10).

**ಮಂದಿರಕ್ಕೆ ಹೋಗೋಣ, ಬಾ ಎಂದು ಜನರು ನನ್ನನ್ನು ಕರೆದಾಗ ನನಗೆ ಸಂತೋಷವಾಯಿತು**. ನಮ್ಮ ಯೆಹೋವ ದೇವರ ಮಂದಿರ ನಿಮಿತ್ತವಾಗಿ ನಿನಗೆ ಸುಕ್ಷೇಮವನ್ನು ಹಾರೈಸುತ್ತೇನೆ" (ಕೀರ್ತ. 122:1–9). ಪ್ರಾರ್ಥಿಸುವ ದೇವ ಮಕ್ಕಳನ್ನು ದೇವರು ಆಶೀರ್ವದಿಸುವನು. **'ಯೆಹೋವನಲ್ಲಿ ಭಯ ಭಕ್ತಿಯುಳ್ಳವರಿಗೆ ಯಾವ ಕೊರತೆಯಿರುವುದಿಲ್ಲ'** (ಕೀರ್ತ. 34:9).

4) **ಕೊಡುವಾಗ ಆಶೀರ್ವಾದ ಹೊಂದುವನು :** (ಲೂಕ. 6:38). ಕೊಡಿರಿ ನಿಮಗೂ ಕೊಡಲ್ಪಡುವುದು. ಬಿತ್ತಿದವನು ಕೊಯ್ಯಲು ಸಾಧ್ಯ. ಇಂದು ನಾವು ದೇವರಿಗಾಗಲಿ, ಇತರರಿಗಾಗಲಿ ಕೊಡುವುದರಲ್ಲಿ ಆಶೀರ್ವಾದ ಅಡಕವಾಗಿರುತ್ತದೆ. ನಾವು ದೇವರಿಗೆ ಮೊದಲಾಗಿ ನಮ್ಮನ್ನೇ ನಾವು ಕೊಡಬೇಕು (ರೋಮ. 12:1) ನಂತರವಾಗಿ ದಶಮಾಂಶವನ್ನು (ಮಲಾ. 3:8–11). ಕಾಣಿಕೆಯನ್ನೂ (ಧರ್ಮೋ. 16:17) ಶಕ್ತನೂಸಾರವಾಗಿ, ನಂತರವಾಗಿ ಪ್ರಥಮ ಫಲವನ್ನು (ಜ್ಞಾನೋ. 3:9–10). ತಲಾಂತುಗಳನ್ನು ಬಚ್ಚಿಡದೆ ದೇವರಿಗೆ ಕೊಡಬೇಕು. ಮೆಕೆದೋನ್ಯ ಸಭೆಯವರು ವಿಪರೀತ ಬಡತನದಲ್ಲಿದ್ದರೂ ದೇವರಿಗೆ ಹಾಗೂ ಅಪೋಸ್ತಲರಿಗೆ (ಸೇವಕರಿಗೆ) ಕೊಡುವುದನ್ನು ಬಿಡಲಿಲ್ಲ. ಪ್ರಿಯ ದೇವ ಮಗುವೆ ನೀನು ದೇವರಿಗೆ ನಿನ್ನ ಸಮಯವನ್ನು, ನಿನ್ನನ್ನು ಸರ್ಮಪಿಸಿಕೊಳ್ಳಲು ಹಿಂದೆ ಮುಂದೆ ನೋಡುತ್ತೀಯಾ? ಪರಲೋಕ ದ್ವಾರಗಳನ್ನು ತೆರೆದು ದೇವರು ನಿನ್ನನ್ನು ಆಶೀರ್ವದಿಸಬೇಕಾದರೆ ನೀನು ನಿನ್ನ ಕೈ ತೆರೆಯಬೇಕು. ಕೆಲವರಿಗೆ ದೇವರು ಉತ್ತಮ ಉದ್ಯೋಗವನ್ನು ಕೊಡಿಸುತ್ತಾನೆ. ಭಡ್ತಿ ಮೇಲೆ ಭಡ್ತಿ ಕೊಡುತ್ತಾನೆ ಕಾರಣ ಅವರು ದೇವರ ರಾಜ್ಯಕ್ಕೆ, ಸೇವೆಗಾಗಿ ಹೇರಳವಾಗಿ ಕೊಡಲಿ ಎಂದುಕೊಂಡು ಕೊಡುತ್ತಾನೆ. ಅವರಾದರೋ ಅದನ್ನು ತಿಳಿಯದೆ ಅವರ ಹಣವನ್ನು ಅವರ ಸ್ವಂತ ಕಾರ್ಯಗಳಿಗಾಗಿ ಉಪಯೋಗಿಸುತ್ತಾರೆ ಹೊರತು ದೇವರಿಗೆ ಕೊಡುವುದಿಲ್ಲ. ಪ್ರಿಯರೇ, ನಿನ್ನನ್ನು ದೇವರು ಅದಕ್ಕೆಂದು ಎಬ್ಬಿಸಿರುವುದರಿಂದ ನೀನು ಆಶೀರ್ವಾದವಾಗಿ ಹೊಂದಿದ್ದನ್ನು ದೇವರಿಗಾಗಿ ಬಿತ್ತು ಇಲ್ಲವಾದರೆ ನಿನಗೆ ಆಶೀರ್ವಾದವಾಗಿ ಕೊಡಲ್ಪಟ್ಟಿರುವುದು ಶಪಿಸಲ್ಪಡುವದು (ಮಲಾ. 2:1–2). ನಾವು ದೇವರ ಕಡೆಗೆ ತಿರುಗುವ ಒಂದು ಕಾರ್ಯವೆಂದರೆ ನಮ್ಮ ದಶಮಾಂಶವನ್ನು ದೇವರಿಗಾಗಿ ಕೊಡುವುದಾಗಿದೆ (ಮಲಾ. 3:7). ದೇವರು ನಿನ್ನನ್ನು ಸಭೆಯಲ್ಲಿ ಅದಕ್ಕಾಗಿ ತಂದು ನಿನಗೆ ಉತ್ತಮ ಆದಾಯ ಕೊಡುತ್ತಿರುವ ಉದ್ದೇಶವೇನೆಂದರೆ ನೀನು ದೇವರಿಗಾಗಿ ಕೊಡಬೇಕಾಗಿದೆ. ನೀನು ಕೊಡದೆ ಹೋದರೆ ನಿನ್ನ ಮುಂದೆಯೆ ಇನ್ನೊಬ್ಬರಿಂದ ಸಹಾಯ ಬರುವಂತೆ ಮಾಡುತ್ತಾನೆ. "ನೀನು ಈಗ ಸುಮ್ಮನಿದ್ದು ಬಿಟ್ಟರೆ ಬೇರೆ ಕಡೆಯಿಂದ ಯೆಹೂದ್ಯರಿಗೆ ಸಹಾಯವೂ, ವಿಮೋಚನೆಯೂ ಉಂಟಾಗುವುದು. ನೀನಾದರೋ ನಿನ್ನ ತಂದೆಯ ಮನೆಯವರೊಡನೆ ನಾಶವಾಗುವಿ. ಇದಲ್ಲದೆ ನೀನು ಇಂಥ ಸಂದರ್ಭಕ್ಕಾಗಿಯೇ ಪಟ್ಟಕ್ಕೆ ಬಂದಿರಬಹುದು. ಯಾರು ಬಲ್ಲರು? (ಎಸ್ತೆ. 4:14). ಇಂದು ಅನೇಕರು ದೇವರ ಸೇವೆಗಾಗಿ ಸಭಾಪಾಲಕರು ಬಹಳ ಕಷ್ಟಪಡುವಾಗ ವಿಶ್ವಾಸಿಗಳೂ ನೋಡಿಯೂ ನೋಡದವರಾಗಿ ಸಭೆ ಎಂದರೆ, ಸೇವೆ ಎಂದರೆ ಬರೀ ಸೇವಕರಿಗೆ ಸಂಬಂಧಿಸಿದ್ದು ಎಂದು ಕೊಂಡು ಕಣ್ಣುಚ್ಚಿಕೊಂಡು ಸುಮ್ಮನಿರುತ್ತಾರೆ. ದೇವರ ವಾಕ್ಯ ಹೇಳುತ್ತದೆ, **"ನನ್ನ ಆಲಯವು ಆಹಾರ ಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ"** (ಮಲಾ. 3:10). ನಾವು ಕೊಡುವಾಗ ದೇವರು ನಮಗೆ ಕೊಡುತ್ತಾನೆ. **"ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು"** (2 ಕೊರಿ. 9:7).

5) **ನಾವು ಮತ್ತೊಬ್ಬರನ್ನು ಆಶೀರ್ವದಿಸುವಾಗ ಆಶೀರ್ವಾದವನ್ನು ನಾವು ಬಾಧ್ಯವಾಗಿ ಹೊಂದುತ್ತೇವೆ :** (1 ಪೇತ್ರ. 3:9). ಇಂದು ಅನೇಕರನ್ನು ಆಶೀರ್ವದಿಸಲು ಭಯ, ಕಾರಣ ಅವರು ತಮಗಿಂತ ಶ್ರೀಮಂತರಾಗುವರು ಎಂಬುದೇ ಆಗಿದೆ. **'ಶಪಿಸುವುದು ಇಷ್ಟವಾಗಿದ್ದರಿಂದ ಅದು ಅವನಿಗೆ ಬಂತು; ಆಶೀರ್ವದಿಸುವುದು ಇಷ್ಟವಲ್ಲದ್ದರಿಂದ ಅದು ಅವನಿಗೆ ದೂರವಾಯಿತು'** (ಕೀರ್ತ. 109:17). ನೀನು ಆಶೀರ್ವದಿಸುವುದನ್ನು ಇಷ್ಟಪಡುವಿಯಾದರೆ ಅದು ನಿನಗೆ ತಪ್ಪದೆ ಬರುವುದು. ಯೇಸು ಶಿಷ್ಯರಿಗೆ ಹೀಗೆ ಹೇಳಿದನು, **"ನೀವು ಯಾವ ಮನೆಯೊಳಗೆ ಹೋದರೂ ಈ ಮನೆಗೆ ಶುಭವಾಗಲಿ ಎಂದು ಮೊದಲು ಹೇಳಿರಿ"** (ಲೂಕ. 10:5). ಆಶೀರ್ವದಿಸುವುದನ್ನು ಕಲಿಯಿರಿ.

ಮುಂದುವರಿಯುವದು.......

ಕರ್ತನಲ್ಲಿ ನಿಮ್ಮ ಪ್ರೀತಿಯ

**– ಪಾ|| ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು (ಯೆಶಾ. ೩೫:10).

ಆರೋಗ್ಯ ಸ್ವರ

## ಪೋಷಕಾಂಶಗಳ ಪ್ರಯೋಜನಗಳು :

1) **ವಾಲ್‌ನಟ್ (ಅಕ್ರೋಟು)**

* ವಿಟಾಮಿನ್ ಸಿ ಯ ಸಮೃದ್ಧ ಮೂಲ.
* ಇದು ಒಂದು ಆಂಟಿ ಆಕ್ಸಿಡಾಂಟ್.
* ಒಮೇಗಾ 3 ಫ್ಯಾಟಿ ಆಸಿಡ್‌ನ ಸಮೃದ್ಧ ಮೂಲ ಹಾಗಾಗಿ ಇದು ಹೃದಯಕ್ಕೆ ಒಳ್ಳೆಯದು.
* ಪ್ರೊಟೀನಿನ ಉತ್ತಮ ಮೂಲ.
* ಅಧಿಕ ಕ್ಯಾಲರಿಗಳು ಇರುವುದರಿಂದ ಹದದಲ್ಲಿ ಉಪಯೋಗಿಸುವದು ಅತ್ಯಗತ್ಯ.
* ಕುರುಕಲು ತಿಂಡಿಯಾಗಿ ಉಪಯೋಗಿಸಬಹುದು.
* ಸಲಾಡ್‌ಗಳಲ್ಲಿ ಅಥವಾ ಪಾಸ್ತಾಗಳಲ್ಲಿ ಅಥವಾ ಓಟ್ ಜೊತೆ ಸವರಿ ತಿನ್ನಬಹುದು.
* ಇದು ಮ್ಯಾಂಗನೀಸ್ ಮತ್ತು ಕಾಪರ್‌ಗಳ ಅತ್ಯುತ್ತಮ ಮೂಲವಾಗಿದೆ. ಇದರಲ್ಲಿ ಮೆಗ್ನೀಸಿಯಂ, ಝಿಂಕ್, ಕಬ್ಬಿಣ, ಕ್ಯಾಲ್ಸಿಯಂ, ಸೆಲೆನಿಯಂ ಮತ್ತು ಫಾಸ್ಫರಸ್‌ಗಳು ಉತ್ತಮ ಪ್ರಮಾಣದಲ್ಲಿ ಇವೆ.
* ಸೋಡಿಯಂ ಕಡಿಮೆ ಪ್ರಮಾಣದಲ್ಲಿದೆ.
* ನಿಯುತ ಸೇವನೆಯಿಂದ ಕೊಲೆಸ್ಟ್ರಾಲ್ ಮಟ್ಟವು ಕಡಿಮೆಯಾಗುತ್ತದೆ. ರಕ್ತದಲ್ಲಿರುವ ಅಧಿಕ ಸಕ್ಕರೆಯ ಅಂಶವನ್ನು ನಿಯಂತ್ರಿಸುತ್ತದೆ ಮತ್ತು ಹೃದಯ ರಕ್ತನಾಳಗಳ ಚಟುವಟಿಕೆಯನ್ನು ಉತ್ತಮಗೊಳಿಸುತ್ತದೆ.
* ಇದು ಅನ್–ಸ್ಯಾಚುರೇಟೆಡ್ ಫ್ಯಾಟಿ ಆಸಿಡ್ ಅನ್ನು ಹೊಂದಿದೆ.

2) **ಓಟ್ಸ್ :**

* ಇದರಲ್ಲಿ ಕರಗುವಂತಹ ಮತ್ತು ಕರಗಲಾರದ ನಾರಿನಂಶಗಳೆರಡೂ ಇವೆ.
* ಹೃದಯದ ಕಾಯಿಲೆಯನ್ನು ತಗ್ಗಿಸಲು ನಿತ್ಯವೂ 3 ಗ್ರಾಂಗಳಷ್ಟು ಓಟ್ಸ್ ಸೇವಿಸುವುದರಿಂದ ಸಹಾಯವಾಗುತ್ತದೆ.
* ರಕ್ತದಲ್ಲಿ ಸಕ್ಕರೆಯ ಮಟ್ಟವನ್ನು ಸ್ಥಿರವಾಗಿರಿಸಲು ಸಹಾಯಕ.
* ಒಂದು ಕಪ್ ಬೇಯಿಸಿದ ಓಟ್ಸ್ 4 ಗ್ರಾಂನಷ್ಟು ನಾರಿನಂಶವನ್ನು ಒದಗಿಸುತ್ತದೆ.
* ಇದು ವಿಟಾಮಿನ್ ಬಿ, ಇ ಮತ್ತು ಖನಿಜಾಂಶಗಳಾದ ಕ್ಯಾಲ್ಸಿಯಂ, ಮೆಗ್ನೇಸಿಯಂ, ಝಿಂಕ್ ಮತ್ತು ಫಾಸ್ಫರಸ್ ಅನ್ನು ಹೊಂದಿದೆ.
* ಬೆಳಗ್ಗಿನ ಉಪಾಹಾರಕ್ಕೆ ಇದು ಅತ್ಯುತ್ತಮ ಆಹಾರ.
* ಓಟ್ಸ್ ಮೂಳೆ, ಹಲ್ಲು ಮತ್ತು ಸ್ನಾಯುಗಳ ಬೆಳವಣಿಗೆಗೆ ಸಹಕಾರಿ
* ಓಟ್ಸ್‌ನಲ್ಲಿರುವ ಒಂದು ಅಂಶ ಅಂದರೆ ಬೀಟಾಗ್ಲೂಕೋನ್‌ಗಳು, ಇದೊಂದು ಕರಗುವಂತಹ ನಾರಿನಂಶ, ಇದು ರಕ್ತದ ಕೊಲೆಸ್ಟ್ರಾಲ್ ಅನ್ನು ತಗ್ಗಿಸುವಲ್ಲಿ ಬಹಳ ಪರಿಣಾಮಕಾರಿ ಪಾತ್ರವನ್ನು ವಹಿಸುತ್ತದೆ.
* ಓಟ್ಸ್ ಮತ್ತು ಧಾನ್ಯಗಳು ಟೋಕೋಟ್ರಿಯೆನಾಲ್ಸ್‌ಗಳ ಅತ್ಯುತ್ತಮ ಮೂಲಗಳೆನಿಸಿವೆ.
* ಇದನ್ನು ಕಡಿಮೆ ಕೊಬ್ಬಿನ, ಹೆಚ್ಚು ನಾರಿನ ಆಹಾರದ ರೀತಿಯಲ್ಲಿ ಸೇವಿಸಿ, ಬಹಳಷ್ಟು ವ್ಯಾಯಾಮ ಮಾಡಿದರೆ ಉತ್ತಮ ಪರಿಣಾಮವನ್ನು ಪಡೆಯಬಹುದು. ಪ್ರತಿದಿನವೂ ಅರ್ಧದಿಂದ ಒಂದು ಕಪ್ ಅಂದರೆ ಸುಮಾರು ಒಂದೂವರೆಯಿಂದ ಮೂರು ಔನ್ಸ್‌ಗಳಷ್ಟು ಓಟ್ಸ್ ಅನ್ನು ಸೇವಿಸುವದು ಒಳ್ಳೆಯದು.
* ಇನ್ನಿತರ ಅನೇಕ ಧಾನ್ಯಗಳು ಮತ್ತು ತರಕಾರಿಗಳ ರೀತಿಯಲ್ಲಿಯೇ ಓಟ್ಸ್‌ನಲ್ಲಿ ನೂರಾರು ಫೈಟೋ ಕೆಮಿಕಲ್ಸ್‌ಗಳು ಅಂದರೆ ಸಸ್ಯಜನ್ಯ ರಾಸಾಯನಿಕಗಳು ಇವೆ. ಕೆಲವು ಫೈಟೋ ರಾಸಾಯನಿಕಗಳು ಮನುಷ್ಯರಲ್ಲಿ ಕ್ಯಾನ್ಸರ್ ಆಗುವ ಅಪಾಯವನ್ನು ತಗ್ಗಿಸುತ್ತವೆ. ಎಂದು ಭಾವಿಸಲಾಗುತ್ತದೆ. ಓಟ್ಸ್‌ನಲ್ಲಿರುವ ಫೈಟೋ ಈಸ್ಟ್ರೋಜನ್ ಎಂಬ ಅಂಶವು, ಇದಕ್ಕೆ ಲಿಗ್ನಾನ್ಸ್ ಎಂದು ಕರೆಯುತ್ತಾರೆ. ಇದು ಹಾರ್ಮೋನು ಸಂಬಂಧಿತ ಕಾಯಿಲೆಗಳಾದ ಸ್ತನದ ಕ್ಯಾನ್ಸರ್ ಇತ್ಯಾದಿಗಳ ಅಪಾಯವನ್ನು ತಗ್ಗಿಸುವಲ್ಲಿ ಬಹಳ ಪರಿಣಾಮಕಾರಿ ಎಂದು ನಂಬಲಾಗಿದೆ.
* ಓಟ್ಸ್‌ನಲ್ಲಿರುವ ಕರಗದಂತಹ ನಾರಿನಂಶವು ಜಠರ ಕರುಳಿನವ್ಯೂಹದಲ್ಲಿನ ಕ್ಯಾನ್ಸರ್‌ಕಾರಕ ಅಪಾಯಗಳನ್ನು ತಗ್ಗಿಸುತ್ತದೆ ಎಂದು ನಂಬಲಾಗಿದೆ.
* ಕರಗುವಂತಹ ನಾರಿನಂಶದಿಂದ ಸಮೃದ್ಧವಾದ ಇಡೀ ಓಟ್ಸ್‌ಗಳನ್ನು ನಿತ್ಯವೂ ಸೇವಿಸುವುದರಿಂದ, ಅಧಿಕ ಒತ್ತಡವು ನಿಯಂತ್ರಣಕ್ಕೆ ಬರುತ್ತದೆ ಮತ್ತು ಅದು ರಕ್ತದ ಒತ್ತಡ ನಿಯಂತ್ರಕ ಔಷಧಿಗಳನ್ನು ತೆಗೆದುಕೊಳ್ಳುವ ಅಗತ್ಯವನ್ನು ತಗ್ಗಿಸುತ್ತದೆ ಎಂದು ತಿಳಿದುಬಂದಿದೆ.
* ಓಟ್ಸ್‌ನಲ್ಲಿ ನಾರಿನಂಶವು ಹೆಚ್ಚು ಇರುತ್ತದೆ. ಮಲವಿಸರ್ಜನೆಯನ್ನು ಅದು ಸರಾಗಗೊಳಿಸುತ್ತದೆ.
* ಓಟ್ಸ್ ಸೇವನೆಯು ಮಲವನ್ನು ಹದಗೊಳಿಸಿ ಅದು ಗುದದ್ವಾರದಿಂದ ಸರಾಗವಾಗಿ ಸಾಗಿ ಹೋಗುವಂತೆ ಮಾಡುತ್ತದೆ ಮತ್ತು ಮಲಬದ್ಧತೆಯನ್ನು ನಿವಾರಿಸುತ್ತದೆ.
* ಇದು ದೇಹದ ತೂಕವನ್ನು ಇಳಿಸಲು ಸಹಾಯಮಾಡುತ್ತದೆ ಮತ್ತು ಇದರಲ್ಲಿ ನಾರಿನ ಅಂಶವು ಹೆಚ್ಚು ಇರುವ ಕಾರಣದಿಂದ ಇದು ಕ್ರೀಡಾಳುಗಳ ಉತ್ತಮ ನಿರ್ವಹಣೆಗಾಗಿ ಒಳ್ಳೆಯದು.
* ಇದರಲ್ಲಿ ಫ್ಯಾಟಿ ಆಸಿಡ್ ಸಂತುಲಿತ ಪ್ರಮಾಣದಲ್ಲಿದೆ, ಇದಕ್ಕೂ ದೀರ್ಘಾಯುಸ್ಸು ಮತ್ತು ಉತ್ತಮ ಆರೋಗ್ಯಕ್ಕೂ ನೇರ ಸಂಬಂಧಗಳಿವೆ ಮತ್ತು ಯಾವುದೇ ಇತರ ಧಾನ್ಯಗಳಿಗೆ ಹೋಲಿಸಿದಲ್ಲಿ ಇದರಲ್ಲಿರುವದು ಬಹಳ ಉತ್ತಮ ಮಟ್ಟದ ಅಮಿನೋ ಆಸಿಡ್.

– ಸಂಗ್ರಹ.

ಯೆಹೋವನು ದುಷ್ಟನ ಮನೆಯನ್ನು ಶಪಿಸುವನು, ನೀತವಂತರ ನಿವಾಸವನ್ನೋ ಆಶೀರ್ವದಿಸುವನು (ಜ್ಞಾನೋ. 3:33).

# ಭಯಂಕರವಾದದ್ದು

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**ಯೆಹೋವನು ಹೇಳಿದ್ದೇನಂದರೆ ನಾನು ಒಂದು ನಿಬಂಧನೆಯನ್ನು ಸ್ಥಾಪಿಸುತ್ತೇನೆ, ಕೇಳು; ಲೋಕದಲ್ಲಿ ಎಲ್ಲಿಯೂ ಯಾವ ಜನಾಂಗದಲ್ಲಿಯಾದರೂ ನಡೆಯದಂತಹ ಮಹತ್ಕಾರ್ಯಗಳನ್ನು ನಿನ್ನ ಜನರೆಲ್ಲರು ನೋಡುವಂತೆ ನಡಿಸುವೆನು. ನಿಮ್ಮ ಸುತ್ತಮುತ್ತಲಿರುವ ಎಲ್ಲಾ ಜನರೂ ಯೆಹೋವನು ಮಾಡುವ ಮಹತ್ಕಾರ್ಯವನ್ನು ನೋಡುವರು. ನಾನು ನಿಮ್ಮ ವಿಷಯದಲ್ಲಿ ಮಾಡಬೇಕೆಂದಿರುವದು ಭಯಂಕರವಾದದ್ದು.** (ವಿಮೋ. 34:10)

ಕರ್ತನಲ್ಲಿ ಪ್ರಿಯರೇ ಕಳೆದ ವರ್ಷವೆಲ್ಲಾ ನಾವು ದಾಟಿ ಬಂದ ಅನುಭವವನ್ನು ನೋಡುವಾಗ ಆ ಮಹಾ ಪ್ರವಾಹದಿಂದ ಸಿಲುಕಿ ಬದುಕುಳಿದದ್ದೇ ನಮಗೆ ಆಶ್ಚರ್ಯವೆನಿಸುತ್ತದೆ. ಅನೇಕ ಮರಣ ಪಾಶಗಳು ಸುತ್ತಿಕೊಂಡಿದ್ದವು. ಪಾತಾಳ ವೇದನೆಗಳು ಹಿಡಿದಿದ್ದವು ಚಿಂತೆಯಲ್ಲಿಯೂ ಇಕ್ಕಟ್ಟಿನಲ್ಲಿಯೂ ಬಿದ್ದುಹೋಗಿದ್ದೇವು. ಸಮಸ್ಯೆಗಳು ಹೋರಾಟಗಳ ನಿಮಿತ್ತವಾಗಿ ಅನೇಕ ರಾತ್ರಿಗಳು ನಿದ್ದೆಯಿಲ್ಲದೆ ಕಳೆದ ದಿನಗಳಿದ್ದವು. ಅನೇಕ ಸಾರಿ ಪ್ರಾಣ ಸಂಕಟವೆಂಬ ನೋವಿನಿಂದ ಎಷ್ಟೋ ಸಾರಿ ನಮ್ಮ ಬಾಯಿಂದ ದೇವರೇ ನನಗೆ ಈ ಜೀವಿತ ಸಾಕು ನನ್ನ ಪ್ರಾಣವನ್ನು ತೆಗೆ ಎಂಬುದಾಗಿ ಅರಿಕೆ ಮಾಡಿದ ದಿನಗಳಿಲ್ಲವೆ? ಯಾಕೆ ನನಗೆ ಮಾತ್ರ ಈ ರೀತಿ ಹೋರಾಟ ಎಂಬುದಾಗಿ ಪ್ರಶ್ನಿಸಿದ ದಿನಗಳಿಲ್ಲವೆ? ಅನೇಕ ಸಾರಿ ನನ್ನನ್ನು ಅರ್ಥಮಾಡಿಕೊಳ್ಳಲು ಸಂತೈಸಲು ಬಲಪಡಿಸಲು ಯಾರು ಇಲ್ಲವಲ್ಲ ಎಂಬುದಾಗಿ ಎದುರು ನೋಡಿದ ದಿನಗಳಿಲ್ಲವೆ? ನನಗೆ ಎಲ್ಲವೂ ಸೋಲೆ ಆಗುತ್ತಿದೆ ಎಂದು ಗೋಳಾಡಿದ ದಿನಗಳಿಲ್ಲವೆ ? ಇವುಗಳ ನಡುವೆ ಎಷ್ಟೋ ಸಾರಿ ದೇವರನ್ನು ಮರೆತು ಜೀವಿಸಿದ್ದೇವೆ. ಅಲ್ಲವೆ? ನಾವು ದೇವರನ್ನು ಎಷ್ಟೋ ಸಾರಿ ದುಃಖಪಡಿಸಿದ್ದೇವೆ ಆದರೂ ನಾವು ಅಪನಂಬಿಗಸ್ತರಾಗಿದ್ದರೂ ಕೂಡಾ ನಮ್ಮ ಕರ್ತನು ನಂಬಿಗಸ್ತನಾಗಿ ವರ್ಷವೆಲ್ಲಾ ನಮ್ಮನ್ನು ನಡೆಸಿಕೊಂಡು ಬಂದಿದ್ದಾನೆ. ನಾವು ಇಂದು ಬದುಕಿ ಉಳಿದಿರುವುದು ಆತನ ಕರುಣೆಯಾಗಿದೆ.

ಪ್ರಿಯರೇ, ಕಳೆದ ವರ್ಷ ದಾಟಿದು ನಿಜ ಆದರೆ ಅಣೆಕಟ್ಟನ್ನು ದಾಟಿದ ನೀರು ಅತ್ತರೂ ಹಿಂತಿರುಗಿ ಬರಲಿಕ್ಕೆ ಸಾಧ್ಯವಿಲ್ಲ. ಅವುಗಳಿಗಾಗಿ ಕೊರಗಿ ಪ್ರಯೋಜನವಿಲ್ಲ. ನಾವು ನಾಳೆಗಾಗಿ ಚಿಂತೆ ಮಾಡುತ್ತೇವೆ. ಆದರೆ ನಾಳೆ ಅದು ನಮಗಾಗಿ ಚಿಂತೆ ಮಾಡುತ್ತದೆ. ನಾಳೆ ಇರುವುದು ಅದು ನಮಗಾಗಿ. ಈ ಮಗನಿ(ಳಿ)ಗೆ ಏನು ಕೊಡಬೇಕೆಂದು ಚಿಂತೆ ಮಾಡುತ್ತದೆ (ಮತ್ತಾ. 6:34). ನದಿಗಳು ಮುಂದಕ್ಕೆ ಸಾಗುವವೇ ಹೊರತು ಹಿಂದೆ ಹರಿಯುವುದಿಲ್ಲ. ಅದೇ ರೀತಿ ನಮ್ಮ ಜೀವನವೂ ಕಳೆದುಹೋದ ಬದುಕಿನ ಬಗ್ಗೆ ಚಿಂತಿಸದೇ ಮುಂದೆ ಹೋಗಬೇಕು. ಈ ಹೊಸ ವರುಷದಲ್ಲಿ ಒಳ್ಳೆಯ ತೀರ್ಮಾನದೊಂದಿಗೆ ಕರ್ತನ ಪಾದದಲ್ಲಿ ಸಮರ್ಪಿಸುವುದಾದರೆ ಕರ್ತನು ನಿಮ್ಮ ವಿಷಯದಲ್ಲಿ ಮಾಡಬೇಕೆಂದಿರುವದು ಭಯಂಕರವಾದದ್ದು.

ಅಂದು ಐಗುಪ್ತದ ಪರೋಹನ ದಾಸತ್ವದಿಂದ ಬಿಡುಗಡೆ ಮಾಡಿದ ಇಸ್ರಾಯೇಲ್ಯರು ದೇವರಿಗೆ ವಿರುದ್ಧವಾಗಿ ಪಾಪಮಾಡಿದಾಗ ಮೋಶೆಯು ತನ್ನ ಜನರಿಗಾಗಿ ಮಧ್ಯಸ್ಥಿಕೆ ವಹಿಸಿ ಪ್ರಾರ್ಥಿಸಿದನು (ವಿಮೋ. 32:31–32, 34:8–9). ಅದರ ನಂತರ ಮೋಶೆಯೊಂದಿಗೆ ತನ್ನ ಜನರೊಂದಿಗೆ ದೇವರು ಮಾಡುವ ವಾಗ್ದಾನಗಳನ್ನು ವಿಮೋ. 34:10ರಲ್ಲಿ ಕಾಣಬಹುದು.

ಪ್ರಿಯ ದೇವ ಸಭೆಯೇ ಭಾರಪಡಬೇಡ ಕರ್ತನು ಅಂದು ಮೋಶೆಯೊಂದಿಗೆ, ಇಸ್ರಾಯೇಲ್ಯರೊಂದಿಗೆ ಮಾಡಿದ ಅದೇ ವಾಗ್ದಾನವನ್ನು ಆ ಒಂದು ನಿಬಂಧನೆಯನ್ನು ನಿನ್ನೊಂದಿಗೆ ಮತ್ತು ಸಭೆಯೊಂದಿಗೆ ಆತನು ಸ್ಥಾಪಿಸುತ್ತಾನೆ. ಕರ್ತನಾದ ಯೇಸುಕ್ರಿಸ್ತನು ಹೇಳಿದನು. **"ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು. ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು"** (ಮತ್ತಾ. 16:18–19).

ದೇವ ಸಭೆಯೇ ಕಟ್ಟುವಂಥ, ಬಿಚ್ಚುವಂಥ ಅಧಿಕಾರವನ್ನು ಕರ್ತನು ಲೋಕದವರ ಕೈಯಲ್ಲಿ ಅಲ್ಲ ದೇಶದ ಅಧಿಕಾರಿಗಳ ಕೈಯಲ್ಲಿ ಅಲ್ಲ, ವಿಜ್ಞಾನಿಗಳ ಕೈಯಲ್ಲಿ ಅಲ್ಲ, ಯೇಸುಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು ಯೇಸುಕ್ರಿಸ್ತನ ದೇಹವೆಂಬ ಸಭೆಯಲ್ಲಿರುವ ನಿನಗೆ ಸಭೆಯ ದೇಹದ ಶಿರಸ್ಸುಳ್ಳವನಾಗಿರುವ ಕರ್ತನಾದ ಯೇಸು ಕ್ರಿಸ್ತನು ಅಧಿಕಾರವನ್ನು ಕೊಟ್ಟಿದ್ದಾನೆ. ಇದು ಸಾಧಾರಣವಾದ ಅಭಿಷೇಕವಲ್ಲ ಇದು ಸೈತಾನನ ಸಾಮ್ರಾಜ್ಯವನ್ನು ಅವನ ಕೋಟೆಕೊತ್ತಲುಗಳನ್ನು ಕೆಡವಿ ಹಾಕುವಂತಹ ಅಭಿಷೇಕ ಆಮೆನ್.

ದೇವರೇ, ಚೀಯೋನಿನಲ್ಲಿ ನಿನಗೋಸ್ಕರ ಸ್ತೋತ್ರವು ಸಿದ್ಧವಾಗಿದೆ, ಹರಕೆಗಳು ನಿನಗೆ ಸಲ್ಲುತ್ತವೆ (ಕೀರ್ತ. 65:1).

ಇದುವರೆಗೂ ನಿಮ್ಮ ಸುತ್ತಮುತ್ತಲಿನ ಜನರ ಮೂಲಕವಾಗಿ ವೈರಿಯಾದ ಸೈತಾನನು ನಾನಾ ತಡೆಗಳನ್ನು, ಹೋರಾಟಗಳನ್ನು ವಿಧ ವಿಧವಾಗಿ ನಾನ ತಂತ್ರಗಳೊಂದಿಗೆ ಕಾರ್ಯ ಮಾಡಿರಬಹುದು ಅಥವಾ ಪ್ರೀತಿಗೆ ಪಾತ್ರರಾದವರ ಮೂಲಕವಾಗಿ ನಿಮ್ಮೊಂದಿಗೆ ಶತ್ರುವಾದವನು ಹೋರಾಡಿರಬಹುದು. ಕರ್ತನಾದ ಯೇಸುಕ್ರಿಸ್ತನು ಹೇಳುತ್ತಿದ್ದಾನೆ, ಕೇಳು; ಲೋಕದಲ್ಲಿ ಎಲ್ಲಿಯೂ ಯಾವ ಜನಾಂಗದಲ್ಲಿಯಾದರೂ ನಡೆಯದಂತಹ ಮಹತ್ಕಾರ್ಯಗಳನ್ನು ನಿನ್ನ ಜನರೆಲ್ಲರು ನೋಡುವಂತೆ ನಡಿಸುವೆನು. ನಿಮ್ಮ ಸುತ್ತಮುತ್ತಲಿರುವ ಎಲ್ಲಾ ಜನರೂ ಯೆಹೋವನು ಮಾಡುವ ಮಹತ್ಕಾರ್ಯವನ್ನು ನೋಡುವರು. ನಾನು ನಿಮ್ಮ ವಿಷಯದಲ್ಲಿ ಮಾಡಬೇಕೆಂದಿರುವದು ಭಯಂಕರವಾದದ್ದು.

ದೇವ ಸಭೆಯೋ **"ಬಲವನ್ನೂ, ತೇಜಸ್ಸನ್ನೂ ಹೊದ್ದುಕೊಂಡಿರುವಳು; ಭವಿಷ್ಯತ್ತಿನ ಭಯವಿಲ್ಲದೆ ನಗುತ್ತಿರುವಳು"** (ಜ್ಞಾನೋ. 31:25). ಕರ್ತನು ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದಾನೆ; ನನ್ನ ಸಂಕಲ್ಪವು ನಿಲ್ಲುವದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ; (ಯೆಶಾ. 46:10). ದೇವರು ಅನಾದಿಯಲ್ಲಿಯೇ ಆಲೋಚಿಸಿದ್ದಾನೆ. **'ಎಲೈ [ಇಸ್ರಾಯೇಲೇ], [ಅವನಂತೆ ನೀನೂ] ನಿನಗೆ ಗೊತ್ತಿಲ್ಲದ ಜನಾಂಗವನ್ನು ನಿನ್ನ ಅಧೀನಕ್ಕೆ ಕರೆಯುವಿ, ಇಸ್ರಾಯೇಲಿನ ಸದಮಲಸ್ವಾಮಿ ಎನಿಸಿಕೊಳ್ಳುವ ನಿನ್ನ ದೇವರಾದ ಯೆಹೋವನು ನಿನಗೆ ವೈಭವ ಕೊಟ್ಟಿರುವದನ್ನು ನೋಡಿ ನಿನ್ನನ್ನು ತಿಳಿಯದ ಜನಾಂಗವು ನಿನ್ನ ಆಶ್ರಯಕ್ಕೆ ಓಡಿ ಬರುವದು'** (ಯೆಶಾ. 55:5). **'ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು; ಅರಸರು ನಿನ್ನಲ್ಲಿನ ಉದಯಪ್ರಕಾಶಕ್ಕೆ ಬರುವರು'** (ಯೆಶಾ. 60:4) ಸಮುದ್ರ ವ್ಯಾಪಾರ ಸಮೃದ್ಧಿಯು ನಿನ್ನ ಕಡೆಗೆ ತಿರುಗುವುದು. ಜನಾಂಗಗಳ ಐಶ್ವರ್ಯವು ನಿನಗೆ ದೊರೆಯುವದು (ಯೆಶಾ. 60:5). ಕರ್ತನು ನಿಮ್ಮ ದುರವಸ್ಥೆಯನ್ನು ನಿಮ್ಮ ಕಣ್ಣೆದುರಿಗೆ ತಪ್ಪಿಸಿ ನಿಮ್ಮನ್ನು ಲೋಕದ ಸಕಲ ಜನಾಂಗಗಳಲ್ಲಿ ಕೀರ್ತಿ ಸ್ತೋತ್ರಗಳಿಗೆ ಗುರಿಮಾಡುವೆನು. ನಿಮ್ಮ ಬೆಟ್ಟಗಳನ್ನೆಲ್ಲ ನೆಲಸಮ ಮಾಡುವೆನು (ಚೆಫ. 3:20).

**'ನಿವಾಸಿಗಳು ಬಿಟ್ಟು ಬಿಟ್ಟ, ದ್ವೇಷಕ್ಕೀಡಾದ, ಯಾರೂ ಹಾದು ಹೋಗದ ನಿನಗೆ ನಿತ್ಯ ಶ್ರೇಷ್ಠತೆಯನ್ನು ದಯಪಾಲಿಸಿ ನಿನ್ನನ್ನು ನಾನು ತಲತಲಾಂತಗಳವರಿಗೆ ಉಲ್ಲಾಸಕರವಾಗುವಂತೆ ಮಾಡುವೆನು'** (ಯೆಶಾ. 60:15).

ಹೌದು ಪ್ರಿಯರೇ, ಕರ್ತನ ಪಾದದಲ್ಲಿ ನಿಮ್ಮನ್ನು ಸಮರ್ಪಿಸಿ ಒಳ್ಳೆಯ ತೀರ್ಮಾನದೊಂದಿಗೆ ಪ್ರಾರ್ಥಿಸುವಾಗ ಕರ್ತನು ನಿಶ್ಚಯವಾಗಿ ನಿಮ್ಮ ವಿಷಯದಲ್ಲಿ ಮಾಡಬೇಕೆಂದಿರುವದು ಭಯಂಕರವಾದದ್ದು. ಆತನು ಮೇಲೆ ಏನನ್ನು ಹೇಳಿದ್ದಾನೆ ಅದನ್ನು ಅನುಗ್ರಹಿಸುವಂತೆ ಮಾಡುತ್ತಾನೆ.

ಕರ್ತನಾದ ಯೇಸುಕ್ರಿಸ್ತನು ಈ ವರುಷದಲ್ಲಿ ನೂತನ ಬಲದೊಂದಿಗೆ, ನೂತನ ಹಾಡಿನೊಂದಿಗೆ, ನೂತನ ಆಶೀರ್ವಾದಗಳಿಂದ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ ಆಮೆನ್.


## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**


ನೀನು ಜೀವಶ್ವಾಸವನ್ನು ಊದಲು ಅವು ಹೊಸದಾಗಿ ಹುಟ್ಟುತ್ತವೆ; ಭೂಮಿಯನ್ನು ನೂತನ ಪಡಿಸುತ್ತಿರುತ್ತೀ (ಕೀರ್ತ. 104:30).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) ಜ್ಞಾನೋ. 10:2ರಲ್ಲಿ **'ದುರ್ದ್ರವ್ಯವು ವ್ಯರ್ಥ ಧರ್ಮವು ಮೃತ್ಯುವಿನಿಂದ ರಕ್ಷಕ'**. ಈ ಲೋಕದಲ್ಲಿ ನಾವು ನೀತಿಯಿಂದ ಜೀವಿಸಿದರೆ ಅಕಾಲಿಕ ಮರಣದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಲೋಕದಲ್ಲಿ ಹುಟ್ಟಿದ ಮನುಷ್ಯನಿಗೆ ಒಂದಲ್ಲಾ ಒಂದು ದಿನ ಮರಣವಿದ್ದೇ ಇದೆ. ಸತ್ಯವೇದದಲ್ಲಿ 3 ವಿಧವಾದ ಮರಣದ ಕುರಿತು ತಿಳಿಸಲ್ಪಟ್ಟಿದೆ.

1) ಆತ್ಮ ಮರಣ, 2) ಶರೀರ ಮರಣ, 3) ನಿತ್ಯ ಮರಣ.

1) **ಆತ್ಮ ಮರಣ:** ನಿಜವಾದ ಮನುಷ್ಯನು ಶರೀರದಲ್ಲಿ ಆತ್ಮವಾಗಿದ್ದಾನೆ. ಆದಿಯಲ್ಲಿ ದೇವರು ಮನುಷ್ಯನನ್ನು ಸೃಷ್ಟಿಮಾಡಿದಾಗ ಆದಿ. 1:26 ಹೇಳುತ್ತದೆ, ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಸೃಷ್ಟಿ ಮಾಡಿದನು. ತಾನು ಸೃಷ್ಟಿಮಾಡಿದ ಮನುಷ್ಯನನ್ನು ದೇವರು ಏದೆನ್ ಎಂಬ ತೋಟದಲ್ಲಿ ಇರಿಸಿದನು. ಅವನಿಗೆ ಎರಡು ಆಜ್ಞೆಗಳನ್ನು ಕೊಟ್ಟನು. 1. ಅವನು ತೋಟವನ್ನು ಕಾಯಬೇಕು. 2. ಅವನು ಒಳಿತು ಕೆಡುಕಿನ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿನ್ನಬಾರದು, ತಿಂದರೆ ಮನುಷ್ಯನು ಸಾಯುವನು (ಆದಿ. 2:15–17). ಆದಿ. 3:1–8ರಲ್ಲಿ ಸರ್ಪದ ಕುಯುಕ್ತಿಗೆ ಮನುಷ್ಯನು ಒಳಬಿದ್ದು ಒಳಿತಿನ ಮತ್ತು ಕೆಡುಕಿನ ಅರುಹುನ್ನುಂಟು ಮಾಡುವ ಮರದ ಹಣ್ಣನ್ನು ತಿಂದನು. ದೇವರು ಆದಿ. 2:15–17ರಲ್ಲಿ ಹೇಳಿದಂತೆ ನೀನು ತಿಂದರೆ ಸಾಯುವಿ ಎಂದು ಅವನು ಶರೀರದಲ್ಲಿ ಸಾಯಲಿಲ್ಲ, ಆತ್ಮದಲ್ಲಿ ಸತ್ತನು. ಆತ್ಮದ ಸಾವು ಅಂದರೇನು? ಪಾಪದ ನಿಮಿತ್ತವಾಗಿ ಕಳಕೊಂಡ ದೇವ ಸಂಬಂಧ ಹಾಗೂ ಅನ್ಯೋನ್ಯತೆಗೆ ಆತ್ಮೀಕ ಮರಣ ವೆನ್ನುತ್ತಾರೆ. ಮನುಷ್ಯನು ಈ ಲೋಕದಲ್ಲಿ ಶರೀರದಲ್ಲಿ ಹುಟ್ಟಿದರೂ ಆತ್ಮದಲ್ಲಿ ಸತ್ತಿದ್ದಾನೆಂದು ದೇವರ ವಾಕ್ಯ ಪ್ರಕಟಿಸುತ್ತದೆ. **'ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು'**. (ಎಫೆ. 2:1)

ಮನುಷ್ಯನು ಹುಟ್ಟು ಪಾಪಿ ಎಂದು ಸತ್ಯವೇದ ತಿಳಿಸುತ್ತದೆ, ನೀತಿವಂತನು ಇಲ್ಲ ಒಬ್ಬನಾದರೂ ಇಲ್ಲ (ರೋಮ. 3:10). **'ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ'** (ರೋಮ. 3:23). ಮನುಷ್ಯನು ಜನ್ಮ ಪಾಪಿ ಮತ್ತು ಕರ್ಮ ಪಾಪಿಯಾಗಿದ್ದಾನೆ. ಯಾವಾಗ ಮನುಷ್ಯನು ದೇವರ ಮುಂದೆ ತನ್ನ ಪಾಪಗಳನ್ನು ಒಪ್ಪಿ ಪಶ್ಚಾತ್ತಾಪದಿಂದ ಅರಿಕೆಮಾಡಿ ತನ್ನ ಪಾಪಗಳಿಗಾಗಿ ದೇವರ ಬಳಿಯಲ್ಲಿ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತಾನೆ ಮತ್ತು ಕರ್ತನಾದ ಯೇಸುಕ್ರಿಸ್ತನು ತನಗಾಗಿ ಈ ಲೋಕಕ್ಕೆ ಬಂದು ಕ್ರೂಜೆಯಲ್ಲಿ ಪ್ರಾಣಕೊಟ್ಟು ತನಗಾಗಿ ಹೂಣಲ್ಪಟ್ಟು, ತನಗಾಗಿ 3ನೇ ದಿನ ಎದ್ದು ಬಂದನು ಎಂದು ಒಪ್ಪಿ, ನಂಬಿ ಬಾಯಿಂದ ಅರಿಕೆಮಾಡಿ ಯೇಸುವನ್ನು ತನ್ನ ಜೀವಿತದ ಸ್ವಂತ ರಕ್ಷಕನು, ಒಡೆಯನು ಎಂದು ಅಂಗೀಕರಿಸಿಕೊಳ್ಳುತ್ತಾನೋ ಆಗ ಆತ್ಮ ಮರಣದಿಂದ ಬಿಡುಗಡೆ ಹೊಂದಿಕೊಳ್ಳುತ್ತಾನೆ.

2) **ಶರೀರ ಮರಣ:** ಆದಿ. 5:4–5 ಸೇತನು ಹುಟ್ಟಿದ ಮೇಲೆ ಆದಾಮನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಎಂಟುನೂರು ವರ್ಷ ಬದುಕಿದನು. ಅವನು ಒಟ್ಟು ಒಂಭೈನೂರ ಮೂವತ್ತು ವರುಷ ಬದುಕಿ ಸತ್ತನು. ಶರೀರದಲ್ಲಿ ಹುಟ್ಟಿದ ಮನುಷ್ಯನು ಒಂದಲ್ಲಾ ಒಂದು ದಿನ ಸತ್ತು ಹೋಗಲೇಬೇಕು. **'ಮನುಷ್ಯರೇ, ಸಾಯಿರಿ ಎಂದು ಆಜ್ಞಾಪಿಸಿ ಅವರನ್ನು ಪುನ: ಮಣ್ಣಿಗೆ ಸೇರಿಸುತ್ತೀ'** (ಕೀರ್ತ. 90:3). ಒಂದು ದಿನ ಶರೀರದಲ್ಲಿ ಸಾಯಲಿಕ್ಕೆ ಇರುವ ನಿಮಿತ್ತ ನವು ಆತ್ಮ ರಕ್ಷಣೆ ಹೊಂದಿ ಪರಿಶುದ್ಧವಾಗಿಯೂ, ದೇವರ ದೃಷ್ಟಿಗೆ ಸರಿಯಾಗಿಯೂ ಜೀವಿಸಬೇಕು. ಈ ಲೋಕವು ನಮಗೆ ಶಾಶ್ವತವಲ್ಲ. **"ನಮ್ಮ ಆಯುಷ್ಕಾಲವು ಎಪ್ಪತ್ತು ವರ್ಷ; ಬಲ ಹೆಚ್ಚಿದರೆ ಎಂಬತ್ತು. ಕಷ್ಟಸಂಕಟಗಳೇ ಅದರ ಆಡಂಬರ ಅದು ಬೇಗನೆ ಗತಿಸಿ ಹೋಗುತ್ತದೆ; ನಾವು ಹಾರಿ ಹೋಗುತ್ತೇವೆ."** (ಕೀರ್ತ. 90:10) ಶರೀರದ ಜೀವಿತವು ತತ್ಕಾಲಿಕವಾದುದರಿಂದ ಇರುವಂಥ ಕಾಲ ಕರ್ತನ ಚಿತ್ತದ ಪ್ರಕಾರವಾಗಿ ಜೀವಿಸಬೇಕು. **"ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು; ಆಗ ಜ್ಞಾನದ ಹೃದಯವನ್ನು ಪಡೆದುಕೊಳ್ಳುವೆವು"** (ಕೀರ್ತ. 90:12).

1) **ನಿತ್ಯ ಮರಣ:** ನಿತ್ಯ ಮರಣ ಅಂದರೆ ನಿತ್ಯಕ್ಕೂ ಸಾಯುವಂತಹ ಅನುಭವ, ನಿತ್ಯಕ್ಕೂ ಪರಿಶುದ್ಧ ದೇವರಿಂದ ಅಗಲುವ ಅನುಭವ, ನಿತ್ಯ ನರಕದಲ್ಲಿ ಕಳೆಯುವ ಅನುಭವವಾಗಿದೆ. ಒಂದು ಸಾರಿ ಒಬ್ಬ ವ್ಯಕ್ತಿ ಈ ಲೋಕದಲ್ಲಿ ನರಕಕ್ಕೆ ಹೋದರೆ ಜೀವ ಇರುವ ಅವನ ಸಂಬಂಧಿಕರು, ಕುಟುಂಬದವರು ಅವನ ಆತ್ಮದ

ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಢವಾಗಿ ನೆರವೇರುವದು (2 ಕೊರಿ. 1:20).

ಶಾಂತಿಗಾಗಿ, ರಕ್ಷಣೆಗಾಗಿ ಪ್ರಾರ್ಥಿಸಿದರೆ ಅದು ಅವನಿಗೆ ಸಿಗುವುದಿಲ್ಲ. ಮನುಷ್ಯನು ಜೀವ ಇರುವಾಗಲೇ ಪಾಪಕ್ಕೆ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಬೇಕು. ಸತ್ತ ನಂತರ ಜೀವಿಸುವ ದಿನಗಳಲ್ಲಿ ಅವನು ಆರಿಸಿದ ಸ್ಥಳಕ್ಕೆ ಹೋಗುತ್ತಾನೆ. **"ಆದರೆ ಹೇಡಿಗಳು, ನಂಬಿಕೆ ಇಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ ಅದು ಎರಡನೆಯ ಮರಣವು (ಶಾಶ್ವತ ಮರಣವು) ಎಂದು ನನಗೆ ಹೇಳಿದನು"** (ಪ್ರಕ. 21:8). "ಆ ಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು. (ಪ್ರಕ. 20:14) ನಿತ್ಯ ಮರಣವು, ನಿತ್ಯ ವೇದನೆ ತರುವಂತದ್ದು ಆಗಿದೆ. ಅಲ್ಲಿಂದ ತಪ್ಪಿಸಲು ಪ್ರಯತ್ನಿಸಿದರೂ ವ್ಯರ್ಥ. ಇಂದು ಜೀವದಿಂದಿರುವ ಸಮಯದಲ್ಲಿ ಆತ್ಮೀಕ ಮರಣ ಮತ್ತು ನಿತ್ಯಮರಣದಿಂದ ತಪ್ಪಿಸಿಕೊಳ್ಳಲು ಸಾಧ್ಯವಿದೆ. ಕ್ರಿಸ್ತನನ್ನು ಅಂಗೀಕರಿಸಿ ಆತ್ಮರಕ್ಷಣೆ ಹೊಂದಿ ಮರಣದಿಂದ ತಪ್ಪಿಸಿಕೊಳ್ಳುವ.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಸಾಕ್ಷಿಯ ಸ್ವರ



ಕರ್ತನ ನಾಮಕ್ಕೆ ಸ್ತೋತ್ರವಾಗಲಿ ನನ್ನ ಹೆಸರು ರಾಜು, ಊರು ಬೆಳ್ತಂಗಡಿ, ಈ ಕೂಟದಿಂದ ನನಗೆ ತುಂಬಾ ಪ್ರಯೋಜನವಾಯಿತು. ದೇವರು ನನಗೆ ಎಲ್ಲಾ ಬಂಧನದಿಂದ ಬಿಡಿಸಿ, ಅನ್ಯಭಾಷೆಯಿಂದ ತುಂಬಿಸಿದ್ದಾರೆ.



ಕರ್ತನ ನಾಮಕ್ಕೆ ಸ್ತೋತ್ರವಾಗಲಿ ನನ್ನ ಹೆಸರು ರೂಪಾಸ್, ಊರು ಬೆಳ್ತಂಗಡಿ. ಈ ಕೂಟದಲ್ಲಿ ಕರ್ತನು ನನ್ನನ್ನು ದೇವರ ವಾಕ್ಯದ ಮರ್ಮ ಗಳಿಂದ ತುಂಬಿಸಿದ್ದಾರೆ ಹಾಗೂ ಹೊಸ ಹೊಸ ಭಾಷೆಗಳನ್ನು ಆಡುವಂತೆ ಕೃಪೆ ತೋರಿಸಿದ್ದಾನೆ.



ಕರ್ತನ ನಾಮಕ್ಕೆ ಸ್ತೋತ್ರವಾಗಲಿ ನನ್ನ ಹೆಸರು ಲೋಲಾಕ್ಷಿ, ಊರು ಸುರತ್ಕಲ್ ಈ ಕೂಟಕ್ಕೆ ಸಮಾಧಾನವಿಲ್ಲದೆ ಬಂದಿದ್ದೆ. ಆದರೆ ದೇವರು ನನಗೆ ಸಮಾಧಾನ್ನು ಕೊಟ್ಟು, ನನ್ನನ್ನು ಅಭೀಷೇಕದಿಂದ ತುಂಬಿಸಿದ್ದಾರೆ ಹಾಗೂ ಉಪಾವಾಸದ ಹಾಗೂ ಪ್ರಾರ್ಥನೆಯ ಮಹತ್ವವನ್ನು ತಿಳಿದುಕೊಳ್ಳುವಂತೆ ದೇವರು ಈ ಕೂಟದಲ್ಲಿ ಸಹಾಯ ಮಾಡಿದ್ದಾನೆ.



ಕರ್ತನ ನಾಮಕ್ಕೆ ಸ್ತೋತ್ರವಾಗಲಿ ನನ್ನ ಹೆಸರು ಕುಸುಮ, ಊರು ಬೆಳ್ತಂಗಡಿ. 20 ವರ್ಷದಿಂದ ದುರಾತ್ಮನ ಬಂಧನದಿಂದ ಕಟ್ಟಲ್ಪಟ್ಟವಳಾಗಿದ್ದ ನನ್ನನ್ನು ದೇವರು ಸಂಪೂರ್ಣವಾಗಿ ಬಿಡಿಸಿ ಆತನ ಸಂತೋಷದಿಂದ ತುಂಬಿಸಿದ್ದಾನೆ ಹಾಗೂ ಆತ್ಮನ ಫಲಗಳ ಕುರಿತು ತಿಳಿದುಕೊಂಡು ಜೀವಿತವನ್ನು ಬದಲಾಯಿಸಿಕೊಳ್ಳಲು ಈ ಕೂಟದ ಮೂಲಕ ದೇವರು ಸಹಾಯ ಮಾಡಿದ್ದಾನೆ.



ಕಲ್ಪನಾ ಭಟ್, ಜೆ.ಸಿ. ನಗರ, (ಬೆಂಗಳೂರು) ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆದ 2ನೇ ಕೆರೀತ್ ಕೂಟದಲ್ಲಿ ಭಾಗವಹಿಸಿದ ನಾನು ಸಮಾಧಾನ ಶಾಂತಿಯನ್ನು ಕಳೆದುಕೊಂಡವಳಾಗಿ ಬಂದಿದ್ದೆ. ಈ ಕೂಟದ ಮೂಲಕ ಪವಿತ್ರಾತ್ಮನ ಅಭಿಷೇಕ, ಸಮಾಧಾನವನ್ನು ಹೊಂದಿ ಸಂತೋಷ ಭರಿತಳಾಗಿದ್ದೇನೆ. ಬಂದಂತಹ ಬೋಧಕರ ವಾಕ್ಯ ಸಂದೇಶದವು ಮನಮುಟ್ಟಿ ನನ್ನ ಜೀವಿತವೇ ಬದಲಾಗಿದೆ.



ಕಾವೇರಿ ಆರ್. ಹರಿಕಾಂತ್, (ಕಾರವಾರ) 5ವರ್ಷದಿಂದ ನಾನು ಮಾನಸಿಕವಾಗಿ ಬಳಲುತ್ತಿದ್ದೆ ನನಗೆ ಜೀವನವೇ ಬೇಡ ಅಂತ ಆತ್ಮಹತ್ಯೆಗೆ ಪ್ರಯತ್ನಿಸುತ್ತಿದೆ ಮತ್ತು ಸೈತಾನನ ಎಲ್ಲಾ ಕಟ್ಟುಗಳಿಂದ ಬಂಧಿಸಲ್ಪಟ್ಟು , ರೋಗ ಪೀಡಿತಳಾಗಿದೆ. ದೇವರು ನನಗೆ 2ನೇ ಕೆರೀತ್ ಈ ಕೂಟದ ಮೂಲಕ ಬಿಡುಗಡೆಯನ್ನು ಮಾಡಿದ್ದಾನೆ.



ದೇವರ ನಾಮಕ್ಕೆ ಸ್ತೋತ್ರವಾಗಲಿ ನಾನು ಅನೇಕ ವರ್ಷದಿಂದ ಭಯ ಪೀಡಿತಳಾಗಿದ್ದೆ. ದೇವರು ಈ ಕೂಟದ ಮೂಲಕ ತನ್ನ ಅಭಿಷೇಕದಿಂದ ತುಂಬಿಸಿ ಭಯದಿಂದ ಬಿಡುಗಡೆಯನ್ನು ಕೊಟ್ಟು ದೇವರ ವಾಕ್ಯದ ಹಾಗೂ ವಾಗ್ದಾನದ ಮೂಲಕ ಆಶೀರ್ವಾದಿಸಿದ್ದಾನೆ. ಹೆಸರು ಎವುಜಿನ್, ಊರು ಬೆಳ್ತಂಗಡಿ.

ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ (ರೋಮ. 12:11).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಇಸ್ರಾಯೇಲ್ಯರು ಹೋರ್ ಬೆಟ್ಟದಿಂದ ಎದೋಮಿನ ಮಾರ್ಗವಾಗಿ ಹೋಗುತ್ತಿರುವಾಗ ದೇವರಿಗೆ ವಿರುದ್ಧವಾಗಿ ಗುಣುಗುಟ್ಟಿದರು (ಅರಣ್ಯ. 21.4–6). **‘ಅದಕ್ಕೆ ಯೆಹೋವನು ಉರಿ ಮಂಡಲಗಳನ್ನು ಜನರೊಳಗೆ ಬರಮಾಡಿದನು; ಅವು ಜನರನ್ನು ಕಚ್ಚಿದ್ದರಿಂದ ಬಹು ಜನ ಸತ್ತು ಹೋದರು’** (ಅರಣ್ಯ. 21:6). ಅರಣ್ಯ. 21:7 ರಲ್ಲಿ ಜನರು ಪಶ್ಚಾತ್ತಾಪಪಟ್ಟು ಮೋಶೆಯ ಬಳಿಗೆ ಬಂದು ಇದರಿಂದ ಬಿಡುಗಡೆಗೊಳಿಸಲು ಪ್ರಾರ್ಥಿಸಲು ಹೇಳಿದರು. ಅರಣ್ಯ. 21:8–9 **ಮೋಶೆ ಜನರಿಗೋಸ್ಕರ ಪ್ರಾರ್ಥಿಸಲಾಗಿ ಯೆಹೋವನು ಅವನಿಗೆ ನೀನು ತಾಮ್ರದಿಂದ ವಿಷಸರ್ಪದ ಆಕಾರವನ್ನು ಮಾಡಿಸಿ ಧ್ವಜಸ್ತಂಭದ ಮೇಲೆ ಎತ್ತಿ ನಿಲ್ಲಿಸಬೇಕು; ಸರ್ಪಗಳಿಂದ ಗಾಯಪಟ್ಟವರು ಅದನ್ನು ನೋಡಿ ಬದುಕಿಕೊಳ್ಳುವರು ಎಂದು ಆಜ್ಞಾಪಿಸಿದನು. ಆದಕಾರಣ ಮೋಶೆ ತಾಮ್ರದಿಂದ ಸರ್ಪದ ಆಕಾರವನ್ನು ಮಾಡಿಸಿ ಧ್ವಜಸ್ತಂಭದ ಮೇಲೆ ಇಡಿಸಿದನು. ಸರ್ಪಗಳಿಂದ ಗಾಯಪಟ್ಟವರಲ್ಲಿ ಯಾರು ಆ ತಾಮ್ರದ ಸರ್ಪವನ್ನು ಲಕ್ಷ್ಯವಿಟ್ಟು ನೋಡಿದರೋ ಅವರೆಲ್ಲರೂ ಬದುಕಿಕೊಂಡರು.** ದೇವರು ಅವರ ಸಮಸ್ಯೆ ನಿವಾರಣೆಗೆ ಒಂದು ಪರಿಹಾರ ಮಾರ್ಗವನ್ನು ಸೂಚಿಸಿದರು. ಸರ್ಪದ ಆಕಾರದ ಮೇಲೆ ಅವರಿಗೆ ನಂಬಿಕೆ ಇಡಲಿಕ್ಕಾಗಲಿ, ಅದನ್ನು ಪೂಜೆ ಮಾಡಲಿಕ್ಕಾಗಲಿ ದೇವರು ಅನುಮತಿಸಲಿಲ್ಲ. ಕಾಲ ಕ್ರಮೇಣ ಇಸ್ರಾಯೇಲ್ಯರು ಈ ತಾಮ್ರದ ಸರ್ಪದ ಆಕಾರವನ್ನು ಪೂಜಿಸ ತೊಡಗಿದರು. ಇದು ದೇವರ ದೃಷ್ಟಿಯಲ್ಲಿ ಘೋರವಾದ ಅಪರಾಧವಾಗಿತ್ತು. **ಪೂಜಾ ಸ್ಥಳಗಳನ್ನು ಹಾಳು ಮಾಡಿ ಕಲ್ಲುಕಂಬಗಳನ್ನು ಒಡೆದು ಅಶೇರ ವಿಗ್ರಹ ಸ್ತಂಭಗಳನ್ನು ಕಡಿದು ಹಾಕಿದನು; ಮೋಶೆಯು ಮಾಡಿಸಿದ ತಾಮ್ರ ಸರ್ಪವನ್ನು ಚೂರು ಚೂರು ಮಾಡಿದನು. ಇಸ್ರಾಯೇಲ್ಯರು ಅದಕ್ಕೆ ಆ ವರೆಗೂ ಧೂಪ ಸುಡುತ್ತಿದ್ದರು. ಅದಕ್ಕೆ ನೆಹುಷ್ಟಾನ್ ಎಂಬ ಹೆಸರಿತ್ತು** (2 ಅರ. 18:4). ಎಷ್ಟೋ ಜನ ಕ್ರೈಸ್ತ ವಿಶ್ವಾಸಿಗಳು ವಿಗ್ರಾಹಾರಾಧನೆಯ ಪಾಪದ ಬಗ್ಗೆ ತಿಳುವಳಿಕೆ ಇದ್ದು ಕೂಡ ವಿಗ್ರಹಗಳನ್ನು ಮನೆಗಳಲ್ಲಿ ಇಟ್ಟಿರುತ್ತಾರೆ. ಯೋಹಾ. 4:23–24 ದೇವರು ಆತ್ಮ ಸ್ವರೂಪನಾಗಿದ್ದಾನೆ. ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು. ನಮ್ಮನ್ನು ಸೃಷ್ಟಿ ಮಾಡಿದ ದೇವರು ಆತ್ಮ ಸ್ವರೂಪನಾಗಿದ್ದಾನೆ. ಆತನು ವ್ಯಕ್ತಿತ್ವವುಳ್ಳವನಾಗಿದ್ದರೂ ಆತನಿಗೆ ಯಾವುದೇ ರೂಪ ಇಲ್ಲ. ಅ.ಕೃ. 17:29 **ನಾವು ದೇವರ ಸಂತಾನದವರಾಗಿದ್ದ ಮೇಲೆ ದೈವವು ಮನುಷ್ಯನ ಶಿಲ್ಪ ವಿದ್ಯೆಯಿಂದಲೂ, ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ, ಬೆಳ್ಳಿ ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು.** ಈ ವಾಕ್ಯ ಮುಂದುವರಿದು ಈ ರೀತಿ ಹೇಳುತ್ತದೆ, **“ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ”** (ಅ.ಕೃ. 17:30). ನಾವು ದೇವರ ಸಂತಾನವಾದ ಮೇಲೆ ನಮ್ಮ ಹಾಗೆ ದೇವರಿಗೂ ಜೀವವಿದೆ ಎಂಬ ಸತ್ಯವನ್ನು ಅರಿಯಬೇಕು ಮತ್ತು ಇಲ್ಲಿಯವರೆಗೆ ದೇವರೆಂದು ನಂಬಿ ಮಾಡಿದ ವಿಗ್ರಹಾರಾಧನೆಗೆ ಪಶ್ಚಾತ್ತಾಪಪಟ್ಟು ದೇವರ ಬಳಿ ಕ್ಷಮೆ ಕೇಳಬೇಕೆಂದು ಆತನು ಬಯಸುತ್ತಾನೆ.

**ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ ಅವರು ವಿಚಾರ ಮಾಡಿಮಾಡಿ ಫಲ ಕಾಣಲಿಲ್ಲ; ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು. ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು. ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶುಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು** (ರೋಮ. 1:21–23). **ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿ ವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು ಆಮೆನ್** (ರೋಮ. 1:25). ಯೆಶಾ. 40:18–26ರಲ್ಲಿ **‘ಹೀಗಿರಲು ದೇವರನ್ನು ಯಾರಿಗೆ ಹೋಲಿಸಿರಿ? ಯಾವ ರೂಪವನ್ನು ಆತನಿಗೆ ಸಮಮಾಡೀರಿ? ವಿಗ್ರಹವಾದರೋ ಶಿಲ್ಪಿಯು ಅದನ್ನು ಎರಕ ಹೊಯ್ಯುವನು, ಅಕ್ಕಸಾಲಿಗನು ಅದಕ್ಕೆ ಚಿನ್ನದ ಕವಚವನ್ನು ಬಡಿದು ಬೆಳ್ಳಿಯ ಸರಪಣಿಗಳನ್ನು ಮಾಡುವನು. [ಇಂಥದ್ದನ್ನು ದೇವರಿಗೆ] ಕಾಣಿಕೆಯನ್ನಾಗಿ ಪ್ರತಿಷ್ಠಿಸಿಕೊಳ್ಳಲಾರದ ಬಡವನು ಹುಳಿತು ಹೋಗದ ಮರವನ್ನು ಹುಡುಕಿ ಅಲುಗದ ವಿಗ್ರಹವನ್ನು ಮಾಡಿಸಲು ಕುಶಲನನ್ನು ವಿಚಾರಿಸಿಕೊಳ್ಳುವನು. ನಿಮಗೆ ತಿಳಿದಿಲ್ಲವೋ? ನೀವು ಕೇಳಲಿಲ್ಲವೋ? ಆದಿಯಿಂದ ನಿಮಗೆ ಉಪದೇಶವಾಗಿ ಬಂದಿಲ್ಲವೋ? ಭೂಮಿಯು ಸ್ಥಾಪಿತವಾದಂದಿನಿಂದ ನೀವು ಗ್ರಹಿಸುತ್ತಿಲ್ಲವೋ? ಭೂಮಂಡಲ ನಿವಾಸಿಗಳು ಮಿಡತೆಗಳಂತೆ ಸಣ್ಣಗೆ ಕಾಣಿಸುವಷ್ಟು ಉನ್ನತವಾದ ಆಕಾಶದಲ್ಲಿ ಆತನು ಆಸೀನನಾಗಿದ್ದಾನೆ. ಆಕಾಶ ಮಂಡಲವನ್ನು ನವರು ಬಟ್ಟೆಯಂತೆ ಹರಡಿ ನಿವಾಸದ ಗುಡಾರದಂತೆ ಎತ್ತಿ ಕಟ್ಟಿದ್ದಾನೆ. ಪ್ರಭುಗಳನ್ನು ನಿರ್ನಾಮ ಮಾಡುತ್ತಾನೆ; ಭೂಪತಿಗಳನ್ನು ಶೂನ್ಯಗೊಳಿಸುತ್ತಾನೆ. ಇವರು ನೆಡಲ್ಪಟ್ಟ ಕೂಡಲೆ ಬಿತ್ತಲ್ಪಟ್ಟ ಕ್ಷಣವೇ, ಇವರ ಸಂತಾನವು ಭೂಮಿಯಲ್ಲಿ ಬೇರೂರಿದಾಗಲೇ, ಆತನ ಶ್ವಾಸದಿಂದ ಬಾಡುವರು, ಬಿರುಗಾಳಿಯು ಇವರನ್ನು ಒಣ ಹುಲ್ಲಿನಂತೆ ಬಡಿದುಕೊಂಡು ಹೋಗುವುದು. ಹೀಗಿರಲು ನನ್ನನ್ನು ಯಾರಿಗೆ**

ಯೆಹೋವನು ದುಷ್ಟನ ಮನೆಯನ್ನು ಶಪಿಸುವನು, ನೀತಿವಂತರ ನಿವಾಸವನ್ನೋ ಆಶೀರ್ವದಿಸುವನು (ಜ್ಞಾನೋ. 3:33).

**ಹೋಲಿಸಿ ಸರಿಸಮಾನ ಮಾಡುತ್ತೀರಿ ಎಂದು ಸದಮಲ ಸ್ವಾಮಿಯು ಕೇಳುತ್ತಾನೆ. ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿಕೊಂಡು ನೋಡಿರಿ! ಈ ನಕ್ಷತ್ರಗಳನ್ನು ಸೃಷ್ಟಿಸಿದಾತನು ಯಾರು? ಈ ಸೈನ್ಯವನ್ನು ಲೆಕ್ಕಕ್ಕೆ ಸರಿಯಾಗಿ ಮುಂದುವರಿಸುತ್ತಾನಲ್ಲಾ; ಎಲ್ಲವನ್ನೂ ಹೆಸರೆತ್ತಿ ಕರೆಯುತ್ತಾನೆ; ಆತನು ಅತಿ ಬಲಾಢ್ಯನೂ, ಮಹಾಶಕ್ತನೂ ಆಗಿರುವುದರಿಂದ ಅವುಗಳೊಳಗೆ ಒಂದೂ ಕಡಿಮೆಯಾಗದು.'** ಈ ಮೇಲಿನ ವಚನಗಳ ಮೂಲಕ ದೇವರಿಗೆ ಯಾವುದೇ ಆದಂತಹ ರೂಪವನ್ನು ಮನುಷ್ಯರಾದ ನಾವು ಕೊಡಲು ಸಾಧ್ಯವಿಲ್ಲ ಹಾಗೂ ದೇವರನ್ನು ಯಾವುದಕ್ಕೂ ಹೋಲಿಸಲಾಗದು ಎಂದು ತಿಳಿದುಕೊಂಡಿದ್ದೇವೆ. ಇಸ್ರಾಯೇಲ್ ಜನರು ಹಂತ ಹಂತವಾಗಿ ತಮ್ಮನ್ನು ಬಿಡುಗಡೆ ಮಾಡಿ ಅದ್ಭುತವಾಗಿ ನಡೆಸಿದ ದೇವರನ್ನು ಮರೆತು ವಿಗ್ರಹಾರಾಧಕರಾದರು. ಇದು ಅವರ ಹಿಂಜಾರುವಿಕೆಗೆ ಕಾರಣವಾಯಿತು (ಯೆರೆ. 10:1–10, ಕೀರ್ತ. 115:4–8, 135:15–18).

III) ಅನ್ಯಜನರ ಸಂಪ್ರದಾಯ ಹಾಗೂ ಅಭ್ಯಾಸಗಳನ್ನು ಅನುಸರಿಸಿದರು. ಇಸ್ರಾಯೇಲ್ ಜನರನ್ನು ಕರ್ತನು ಐಗುಪ್ತದ ದಾಸತ್ವದಿಂದ ಬಿಡುಗಡೆ ಮಾಡಲು ಅನೇಕ ಕಾರಣಗಳಿದ್ದವು. ಅದನ್ನು ಈ ಸಮಯದಲ್ಲಿ ಧ್ಯಾನಿಸೋಣ.

1) **ಪಿತೃಗಳಿಗೆ ಕರ್ತನು ಮಾಡಿದ ವಾಗ್ದಾನ ನೆರವೇರಿಸಲು** (ಆದಿ. 15:12–16). **'ಯೆಹೋವನು ನಿಮ್ಮನ್ನು ಪ್ರೀತಿಸಿ ತಾನು ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಬೇಕೆಂದು ಐಗುಪ್ತರ ಅರಸನಾದ ಫರೋಹನ ಕೈ ಕೆಳಗೆ ದಾಸರಾಗಿದ್ದ ನಿಮ್ಮನ್ನು ಬಿಡುಗಡೆ ಮಾಡಿ ತನ್ನ ಭುಜಬಲವನ್ನು ಪ್ರಯೋಗಿಸಿ ಆ ದೇಶದೊಳಗಿಂದ ಬರಮಾಡಿದನು'** (ಧರ್ಮೋ. 7:8).

2) **ಇಸ್ರಾಯೇಲರ ನರಳಾಟ (ಗೋಳು) ಕೇಳಿ ಬಿಡುಗಡೆ ಮಾಡಿದನು (ಪಾಪದ ದಾಸತ್ವದ ನರಳಾಟ):'ಈ ಮೇರೆಗೆ ಬಹಳ ದಿನಗಳು ಕಳೆದ ಮೇಲೆ ಐಗುಪ್ತ ದೇಶದ ಅರಸನು ಸತ್ತನು. ಇಸ್ರಾಯೇಲ್ಯರು ತಾವು ಮಾಡಬೇಕಾದ ಬಿಟ್ಟೀ ಕೆಲಸಕ್ಕಾಗಿ ನಿಟ್ಟುಸಿರು ಬಿಟ್ಟು ಗೋಳಾಡುತ್ತಾ ಇದ್ದರು. ಈ ಗೋಳು ದೇವರಿಗೆ ಮುಟ್ಟಿತು. ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ ಇಸಾಕ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡು ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು'** (ವಿಮೋ. 2:23–25).

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ಪ್ರಾರ್ಥನಾ ಮನವಿಗಳು

- ದೇವರ ಮಾಸ ಪತ್ರಿಕೆಯ ಸೇವಗೆಗಾಗಿ, ಎಲ್ಲಾ ಅವಶ್ಯಕತೆಗಳು ಪೂರೈಸಲ್ಪಡುವಂತೆ ಪ್ರಾರ್ಥಿಸಿರಿ (ಫಿಲಿ. 4:19).
- ಪ್ರತಿ ತಿಂಗಳು ನಡೆಯುವ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟಗಳಿಗಾಗಿ ಪ್ರಾರ್ಥಿಸಿರಿ.
- ನಮ್ಮ ಆಶ್ರಮದ ಸೇವೆಗಾಗಿ, ಮಾನಸಿಕ ಅಸ್ವಸ್ಥರ ಪುನರ್‌ವಸತಿ ಕೇಂದ್ರಕಾಗಿ, ವೃದ್ಧಾಶ್ರಮಕ್ಕಾಗಿ, ಅಂಗವಿಕಲರ ಆಶ್ರಮಗಾಗಿ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ಉತ್ತಮವಾದ ಸರ್ಕಾರ ಜಾರಿಗೆ ಬರುವಂತೆ, ದೇವರು ನೇಮಿಸಿದ ಅಧಿಕಾರಿಗಳು ಆಳ್ವಿಕೆಗೆ ಬರುವಂತೆ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದನೆ, ಭ್ರಷ್ಟಾಚಾರ, ವ್ಯಭಿಚಾರ, ಅತ್ಯಾಚಾರ ಇವೆಲ್ಲವುಗಳಿಂದ ಜನರನ್ನು ದೇವರು ರಕ್ಷಿಸುವಂತೆ ಪ್ರಾರ್ಥಿಸೋಣ.

## ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ
5. 50 ಮಂಚ

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಗೊಳ್ಳು. ಮನುಷ್ಯರೆಲ್ಲರ ಕರ್ತವ್ಯ ಇದೆ (ಪ್ರಸ. 12:13).

# $25^{th}$ Wedding Aniversary



## Mr. Vasanth Maben & Mrs. Prajwal Maben

25 ವಸಂತಗಳನ್ನು ಕ್ರಿಸ್ತೇಸುವಿನಲ್ಲಿ ಪ್ರಜ್ವಲಿಸಿ,
ಸಿಹಿ–ಕಹಿಗಳನ್ನು ಜೊತೆ–ಜೊತೆಯಾಗಿ ಅನುಭವಿಸಿ,
ನಮ್ಮ ಬಾಳಿಗೆ ಉಜ್ವಲದಾಯಕವಾದ ದಾರಿ ತೋರಿಸಿದಂತೆ,
ನಿಮ್ಮ ಬಾಳು ನೂರಾರು ವಸಂತಗಳನ್ನು ಪ್ರಜ್ವಲಿಸಲೆಂದು,
ತಂದೆ ದೇವರಲ್ಲಿ ಪ್ರಾರ್ಥಿಸುವ ಮಕ್ಕಳಾದ ಅಂಜಲಿ ಮತ್ತು ಆ್ಯನ್ಸ್‌ಟ

**Princess Beauty Parlour, Malpe**
**Mob: 7760064427, 9141445055**

"ಬತ್ತಿದ ಭೂಮಿಯಲ್ಲಿ ಮಳೆಗರೆದು ಒಣ ನೆಲದಲ್ಲಿ ಕಾಲಿವೆಗಳನ್ನು ಹರಿಸುವೆನು; ನಿನ್ನ ಸಂತಾನದವರಲ್ಲಿ ನನ್ನ ಆತ್ಮವನ್ನು, ನಿನ್ನ ಸಂತತಿಯವರ ಮೇಲೆ ನನ್ನ ಆಶೀರ್ವಾದವನ್ನು ಸುರಿಸುವೆನು." (ಯೆಶಾ. 44:3)

# ಸ್ಥಳೀಯ ಮತ್ತು ವಿದೇಶ ಸುದ್ದಿ

* ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿರುವ ಭಾರತ ಸುಧಾಹರಣೆಗೆ ಸಲಹೆ ಮಾಡಿದೆ. ಮಂಡಳಿಯು ಪರಿಣಾಮಕಾರಿ ಕಾರ್ಯನಿರ್ವಹಿಸಬೇಕು ಹಾಗೂ ಆದರಿಂದ ಫಲಿತಾಂಶವಿರಬೇಕು ಎಂದು ಭಾರತದ ರಾಯಭಾರಿ ತಿಳಿಸಿದ್ದಾರೆ.

* ಭಿನ್ನ ವೈದ್ಯಕೀಯ ಪ್ರಕ್ರಿಯೆಗಳಡಿ ವಿವಿಧ ಚಿಕಿತ್ಸೆಗಳಿಗೆ ಎಷ್ಟು ಶುಲ್ಕ ವಿಧಿಸಲಾಗುತ್ತದೆ ಎಂಬ ಮಾಹಿತಿ ಸಂಗ್ರಹಣೆ ಹಾಗೂ ಚಿಕಿತ್ಸಾ ಘಟಕಗಳನ್ನು ನಿಖರವಾಗಿ ಗುರುತಿಸಲು ಅನುಕೂಲವಾಗುವಂತೆ ದೇಶದಲ್ಲಿನ ಎಲ್ಲಾ ಆಸ್ಪತ್ರೆಗಳಿಗೂ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

* ಪೂರ್ವ ಚೀನಾ ಸಮುದ್ರದ ವಿವಾದಿತ ದ್ವೀಪ ಪ್ರದೇಶಗಳವರೆಗೂ, ಚೀನಾ ತನ್ನ ವಾಯುಗಡಿ ಗುರುತು ಮಾಡಿರುವದನ್ನು ತೀವ್ರವಾಗಿ ಆಕ್ಷೇಪಿಸಿರುವ ಜಪಾನಿಗೆ ಆಸ್ಟ್ರೇಲಿಯಾ, ಜರ್ಮನಿ ಸೇರಿದಂತೆ ವಿವಿಧ ರಾಷ್ಟ್ರಗಳು ಬೆಂಬಲ ಸೂಚಿಸಿವೆ.

* ಭಾರತದ ಲಿಫ್ಟರ್‌ಗಳು ಮಲೇಷ್ಯಾದ ಪೆನಾಂಗ್‌ನಲ್ಲಿ ಮುಕ್ತಾಯಗೊಂಡ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ್ದಾರೆ. ಇದರೊಂದಿಗೆ ಭಾರತ ಯೂತ್ ಹಾಗೂ ಜೂನಿಯರ್ ವಿಭಾಗದಲ್ಲಿ ಒಟ್ಟು 87 ಪದಕಗಳನ್ನು ತನ್ನದಾಗಿಸಿಕೊಂಡಿದೆ.

* ಲದ್ದಾಕ್‌ನಲ್ಲಿ 15 ಡಿಗ್ರಿ ಉಷ್ಣಾಂಶ, ರಾಜಸ್ಥಾನದಲ್ಲಿ ಇಬ್ಬರ ಸಾವು :- ಕಣಿವೆ ರಾಜ್ಯ ಜಮ್ಮು ಮತ್ತು ಕಾಶ್ಮೀರದಲ್ಲಿ ಚಳಿಯ ನಡುಕ ಮುಂದುವರಿದಿದ್ದು, ಲದಾಕ್ ಪ್ರಾಂತ್ಯದ ಪಹಲ್ಗಾಂನಲ್ಲಿ ಉಷ್ಣಾಂಶ-12 ಡಿಗ್ರಿ ತಲುಪಿದೆ. ಇನ್ನು ರಾಜ್ಯದಲ್ಲಿ ಹಿಮಪಾತ ವ್ಯಾಪಕವಾಗಿರುವ ಕಾರಣ ಹಲವು ಹೆದ್ದಾರಿಗಳನ್ನು ಬಂದ್ ಮಾಡಲಾಗಿದ್ದು ಸಂಚಾರ ವ್ಯವಸ್ಥೆ ವ್ಯತ್ಯಯವಾಗಿದೆ.

* ಮಹಾನಗರಗಳ ಬಸ್‌ನಲ್ಲಿ ಜಿಪಿಎಸ್, ಸಿಸಿಟೀವಿ ದಿಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣ ಹಿನ್ನಲೆಯಲ್ಲಿ ಕೇಂದ್ರದ ಕ್ರಮ:- ಸಾರ್ವಜನಿಕ ಬಸ್‌ಗಳಲ್ಲಿ ಮಹಿಳೆಯರ ಸುರಕ್ಷತೆಗೆಂದು ಜಿಪಿಎಸ್, ಸಿಸಿಟೀವಿ ತುರ್ತು ಸೇವೆಯ ಬಟನ್ ಅಳವಡಿಸುವಿಕೆ ಇವೇ ಮುಂತಾದ ನಿರ್ಣಯಗಳಿಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

* ಇನ್ನು ದೇಶಕ್ಕೊಂದು ಟೈಂ, ಅಸ್ಸಾಂಗೊಂದು ಟೈಂ! ಭಾರತೀಯ ಪದ್ಧತಿಯನ್ನು (ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್) ಪಾಲಿಸಿಕೊಂಡು ಬರುತ್ತಿರುವ ಅಸ್ಸಾಂ, ಇದೀಗ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆಯದೇ ಬ್ರಿಟಿಷರು 150 ವರ್ಷಗಳ ಹಿಂದೆ ಜಾರಿಗೆ ತಂದಿದ್ದ 'ಚಹಾ ತೋಟದ ಸಮಯ'ಕ್ಕೆ ವಾಪಸಾಗಲು ನಿರ್ಧರಿಸಿದೆ. ಹೀಗಾಗಿ ಅಸ್ಸಾಂಗೆ ಪ್ರಯಾಣ ಬೆಳೆಸುವವರು ತಮ್ಮ ಗಡಿಯಾರದ ಮುಳ್ಳನ್ನು ಈಗಿರುವ ಸಮಯಕ್ಕಿಂತ ಒಂದು ತಾಸು ಮುಂದಕ್ಕೆ ನಿಲ್ಲಿಸಿಕೊಳ್ಳಬೇಕಾಗುತ್ತದೆ. ಒಂದೇ ದೇಶದಲ್ಲಿ ಎರಡು ಸಮಯ ವಲಯ (ಟೈಂ ಜೋನ್)ಗಳು ಸೃಷ್ಟಿಯಾದಂತಾಗಲಿವೆ.

* ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿರುವ ಮೋಟಾರ್ ಸೈಕಲ್ (ಬೈಕ್) ಅಂಬ್ಯುಲೆನ್ಸ್ ಯೋಜನೆ ಬಗ್ಗೆ ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಅಜಾದ್ ಶ್ಲಾಘಿಸಿದ್ದಾರೆ.

* ನ್ಯೂಜಿಲೆಂಡ್‌ಗೆ 159 ರನ್‌ಗಳ ಗೆಲುವು :- ಮಳೆಯ ಕಾಟದ ನಡುವೆ ಉತ್ಸಾಹದ ಆಟವನ್ನು ಪ್ರದರ್ಶಿಸಿದ ನ್ಯೂಜಿಲೆಂಡ್ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 159 ರನ್‌ಗಳ ಭಾರಿ ಗೆಲವು ಪಡೆಯಿತು. ಇದರೊಂದಿಗೆ ಸರಣಿಯಲ್ಲಿ 1-1ರಲ್ಲಿ ಸಮಬಲ ಸಾಧಿಸಿದೆ.

## ಡಿಜಿಎಮ್ ಬೇತೇಲ್ ಅಂಕಣ

- **ವಿಶ್ವಾಸದಮನೆ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಗುಣಮುಖರಾದಂತಹ ಚಂದ್ರಮ್ಮರವರು ಮರಳಿ ಕುಟುಂಬಕ್ಕೆ ತೆರಳಿದ್ದಾರೆ.**
- **ಡಿಜಿಎಮ್ ಬೇತೇಲ್ ಚರ್ಚ್‌ನಲ್ಲಿ ನಡೆದ 2ನೇ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು.**

ಕರ್ತನಿಗೆ ಭಯಪಡುವವನು ಇಹಪರಲೋಕಗಳ ಎಲ್ಲಾ ಆಶೀರ್ವಾದಗಳಿಗೆ ಪಾತ್ರನಾಗುವನು (ಕೀರ್ತ. 128:1).

## ಮಕ್ಕಳ ಸ್ವರ


1) ಸೊದೋಮ್ ಗೊಮೋರ ಪಟ್ಟಣಗಳಲ್ಲಿ ಎಷ್ಟು ಜನ ನೀತಿವಂತರಿದ್ದರು?
2) "ಮೋವಾಬ್" ಎಂಬ ಹೆಸರಿನ ಅರ್ಥವೇನು?
3) "ಬೆನಮ್ಮಿ" ಎಂಬ ಹೆಸರಿನ ಅರ್ಥವೇನು?
4) "ಬೇರ್ಷಬ" ಎಂಬ ಸ್ಥಳದ ಅರ್ಥವೇನು?
5) "ಯೆಹೋವ ಯಿರೆ" ಎಂಬ ಪದದ ಅರ್ಥವೇನು?
6) "ಎರಡು ನದಿಗಳ ಮಧ್ಯದ ಅರಾಮ್ ಸೀಮೆ" ಇದು ಯಾವ ದೇಶವನ್ನು ಸೂಚಿಸುತ್ತದೆ?
7) "ಕೆದೆಮ್" ಎಂಬ ಪದದ ಅರ್ಥವೇನು?
8) ಈ ಸಂಗತಿಯಿಂದ ಏಸಾವನಿಗೆ __________ ಎಂದು ಹೆಸರಾಯಿತು?
9) "ಎದೋಮ್" ಅಂದರೆ ಏನು?
10) "ಏಸೆಕ್" ಅಂದರೆ ಏನು?

---

**ಜನವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರಗಳು :–**

1. ಅಬ್ರಾಮ (ಆದಿ. 17:5)
2. ಬೋಧಕನ ವೃಕ್ಷ (ಆದಿ. 12:6).
3. ಎಪ್ಪತ್ತೈದು (ಆದಿ. 12:4).
4. ಎಲೀಯೆಜರನು (ಆದಿ. 15:2).
5. ದೇವರು ಕೇಳುವವನು (ಆದಿ. 16:11).
6. ನನ್ನನ್ನು ನೋಡುವ ಜೀವಸ್ವರೂಪನು (ಆದಿ. 16:14).
7. ಸಮೂಹದ ತಂದೆ (ಆದಿ. 17:5).
8. ರಾಣಿ ಅಥವಾ ರಾಜಸ್ತ್ರೀ (ಆದಿ. 17:15).
9. ನಗುತ್ತಾನೆ (ಆದಿ. 17:19).
10. ಸಣ್ಣ ಊರು (ಆದಿ. 19:22).

**ಮನೆ ಮಾರಾಟಕ್ಕಿದೆ**



**ಶಂಕರಪುರದ ದುರ್ಗನಗರದಲ್ಲಿ 1500 sq.ft. R.C.C ಮನೆ ಸಹಿತ 15 ಸೆಂಟ್ಸ್ ಜಾಗ ಮಾರಾಟಕ್ಕಿದೆ.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :**

**08007853167, 09764630343.**

ಪರಾಕ್ರಮದಿಂದಲ್ಲ, ಬಲದಿಂದಲ್ಲ ನನ್ನ ಆತ್ಮನಿಂದಲೇ ಎಂಬುದು ಸೇನಾಧೀಶ್ವರನಾದ ಯೆಹೋವನ ನುಡಿ (ಜೆಕ. 4:6).